# ರಸ್ತೆ ಸಾರಿಗೆ ನಿಗಮ ಅಧಿನಿಯಮ, 1950

(1950ರ ಅಧಿನಿಯಮ ಸಂಖ್ಯೆ 64)

**[04-03-2002ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 22ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 32 ರಿಂದ 48ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

### ಅಧ್ಯಾಯ-I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ-II
### ರಸ್ತೆ ಸಾರಿಗೆ ನಿಗಮಗಳು

3. ರಾಜ್ಯಗಳಲ್ಲಿ ರಸ್ತೆ ಸಾರಿಗೆ ನಿಗಮಗಳ ಸ್ಥಾಪನೆ
4. ನಿಗಮನ
5. ನಿಗಮದ ವ್ಯವಸ್ಥಾಪನೆ ಮತ್ತು ನಿರ್ದೇಶಕರ ಮಂಡಲಿ
6. ನಿಗಮದ ನಿರ್ದೇಶಕನೆಂದು ಆಯ್ಕೆಗೊಳ್ಳುವುದಕ್ಕಾಗಿ ಅಥವಾ ಹಾಗೆ ಇರುವುದಕ್ಕಾಗಿನ ಅನರ್ಹತೆ
7. ಅಧ್ಯಕ್ಷನಿಂದ ಅಥವಾ ನಿರ್ದೇಶಕನಿಂದ ಪದಕ್ಕೆ ರಾಜೀನಾಮೆ
8. ಅಧ್ಯಕ್ಷನನ್ನು ಮತ್ತು ನಿರ್ದೇಶಕರನ್ನು ಪದದಿಂದ ತೆಗೆದುಹಾಕುವುದು
9. ಸದಸ್ಯರ ಖಾಲಿಸ್ಥಾನಗಳು ಇರುವುದರಿಂದಾಗಿ ಅಥವಾ ರಚನೆಯಲ್ಲಿನ ದೋಷವು ನಿಗಮದ ಅಥವಾ ಅದರ ಮಂಡಲಿಯ ಕೆಲಸಗಳನ್ನು ಅಥವಾ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕುದಲ್ಲ
10. ನಿರ್ದಿಷ್ಟ ಉದ್ದೇಶಗಳಿಗಾಗಿ ಮಂಡಲಿಯೊಂದಿಗೆ ವ್ಯಕ್ತಿಗಳನ್ನು ತಾತ್ಕಾಲಿಕವಾಗಿ ಜೊತೆಗೂಡಿಸಿಕೊಳ್ಳುವುದು
11. ಮಂಡಲಿಯ ಸಭೆಗಳು
12. ಸಮಿತಿಗಳನ್ನು ನೇಮಕ ಮಾಡುವ ಮತ್ತು ಪ್ರಕಾರ್ಯಗಳನ್ನು ವಹಿಸಿಕೊಡುವ ಅಧಿಕಾರ
13. ಆದೇಶಗಳನ್ನು ಮತ್ತು ಇತರ ಲಿಖಿತಗಳನ್ನು ಅಧಿಪ್ರಮಾಣೀಕರಿಸುವುದು
14. ನಿಗಮದ ಅಧಿಕಾರಿಗಳು ಮತ್ತು ನೌಕರರು
15. ವ್ಯವಸ್ಥಾಪಕ ನಿರ್ದೇಶಕ, ಮುಖ್ಯ ಲೆಕ್ಕಪತ್ರಾಧಿಕಾರಿ ಮತ್ತು ಹಣಕಾಸು ಸಲಹೆಗಾರ

16. ಎಲ್ಲಾ ಅಧಿಕಾರಿಗಳು ಮತ್ತು ನೌಕರರ ಬಗ್ಗೆ ಸಾಮಾನ್ಯ ಅನರ್ಹತೆ
17. ಸಲಹಾ ಪರಿಷತ್ತಿನ ನೇಮಕ

## ಅಧ್ಯಾಯ-IIಎ

### ಪೂರಕ ನಿಗಮಗಳು

17ಎ. ಪೂರಕ ನಿಗಮಗಳ ಸ್ಥಾಪನೆ

## ಅಧ್ಯಾಯ-III

### ನಿಗಮದ ಅಧಿಕಾರಗಳು ಮತ್ತು ಕರ್ತವ್ಯಗಳು

18. ನಿಗಮದ ಸಾಮಾನ್ಯ ಕರ್ತವ್ಯ
19. ನಿಗಮದ ಅಧಿಕಾರಗಳು
20. ನಿಗಮದ ರಸ್ತೆ ಸಾರಿಗೆ ಸೇವೆಯ ಕಾರ್ಯಾಚರಣೆಯನ್ನು ಇನ್ನೊಂದು ರಾಜ್ಯದೊಳಗಿನ ಪ್ರದೇಶಗಳಿಗೆ ವಿಸ್ತರಿಸುವುದು
21. ಅಂಚೆಯ ಸಾಗಣೆ

## ಅಧ್ಯಾಯ-IV

### ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

22. ನಿಗಮದ ಹಣಕಾಸಿನ ಬಗ್ಗೆ ಸಾಮಾನ್ಯ ತತ್ವ
23. ನಿಗಮದ ಬಂಡವಾಳ
24. ನಿಗಮದ ಹೆಚ್ಚಿನ ಬಂಡವಾಳ
25. ರಾಜ್ಯ ಸರ್ಕಾರದಿಂದ ಖಾತರಿ
26. ಸಾಲ ತೆಗೆದುಕೊಳ್ಳುವ ಬಗ್ಗೆ ಅಧಿಕಾರಗಳು
27. ನಿಗಮದ ನಿಧಿ
28. ಬಡ್ಡಿ ಮತ್ತು ಡಿವಿಡೆಂಡಿನ ಸಂದಾಯ
29. ಇಳಿತಾಯ ಮತ್ತು ಮೀಸಲು ಮತ್ತು ಇತರ ನಿಧಿಗಳಿಗಾಗಿ ಉಪಬಂಧ
30. ನಿವ್ವಳ ಲಾಭಗಳ ವಿಲೆ
31. ಖರ್ಚು ಮಾಡಲು ನಿಗಮದ ಅಧಿಕಾರ
32. ಬಜೆಟ್
33. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

## ಅಧ್ಯಾಯ-V

### ಸಂಕೀರ್ಣ

34. ರಾಜ್ಯ ಸರ್ಕಾರದಿಂದ ನಿರ್ದೇಶನ
35. ವಿವರಪಟ್ಟಿಕೆಗಳು ಮತ್ತು ವರದಿಗಳು
36. ವಿಚಾರಣೆಗೆ ಆದೇಶ ಮಾಡುವ ಅಧಿಕಾರ
37. ನಿಗಮದ ಉದ್ಯಮದ ಒಂದು ಭಾಗವನ್ನು ನಿಯಂತ್ರಿಸುವ ಅಧಿಕಾರ

38. ನಿಗಮವನ್ನು ರದ್ದುಗೊಳಿಸುವ ಅಧಿಕಾರ

39. ನಿಗಮದ ಸಮಾಪನ

40. ರಸ್ತೆ ಸಾರಿಗೆ ಉದ್ಯಮವನ್ನು ಆರ್ಜಿಸುವುದಕ್ಕೆ ಸಂಭಂದ ಪಟ್ಟಂತೆ ನಷ್ಟಪರಿಹಾರ

41. ನಿಗಮವು ಸ್ಥಳೀಯ ಪ್ರಾಧಿಕಾರವಾಗಿರುವುದಾಗಿ ಭಾವಿಸತಕ್ಕುದು ಮತ್ತು ಅನ್ಯಪಕ್ಷಕಾರನ ಹೊಣೆಯ ಬಗ್ಗೆ ಉಪಬಂಧ

42. ಪ್ರವೇಶಾಧಿಕಾರ

43. ನಿಗಮದ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಲೋಕನೌಕರರಾಗಿರತಕ್ಕುದು

44. ನಿಯಮ ರಚನಾಧಿಕಾರ

45. ವಿನಿಯಮ ರಚನಾಧಿಕಾರ

46. ನಿಯಮಗಳ ಉಲ್ಲಂಘನೆಗಾಗಿ ದಂಡ

47. ಮುಂಬಯಿಗೆ ಸಂಬಂಧಪಟ್ಟ ವಿಶೇಷ ಉಪಬಂಧಗಳು

47ಎ. ನಿರ್ದಿಷ್ಟ ನಿಗಮದ ಪುನರ್‌ರಚನೆಗೆ ಅಥವಾ ವಿಸರ್ಜನೆಗೆ ಸಂಬಂಧ ಪಟ್ಟಂತೆ ವಿಶೇಷ ಉಪಬಂಧ

48. ಮುಂಬಯಿ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಸಂಬಂಧಪಟ್ಟ ಮಧ್ಯಕಾಲೀನ ಉಪಬಂಧಗಳು

# ರಸ್ತೆ ಸಾರಿಗೆ ನಿಗಮ ಅಧಿನಿಯಮ, 1950

(1950ರ ಅಧಿನಿಯಮ ಸಂಖ್ಯೆ 64)

[4ನೇ ಡಿಸೆಂಬರ್ 1950]

ರಸ್ತೆ ಸಾರಿಗೆ ನಿಗಮಗಳನ್ನು ನಿಗಮನಗೊಳಿಸುವುದಕ್ಕಾಗಿ ಮತ್ತು ನಿಯಂತ್ರಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಇದು, ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು :-

## ಅಧ್ಯಾಯ-I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ರಸ್ತೆ ಸಾರಿಗೆ ನಿಗಮ ಅಧಿನಿಯಮ, 1950 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ:

ಪರಂತು, ದೆಹಲಿ ರಸ್ತೆ ಸಾರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1971 ಇದು ಪ್ರಾರಂಭವಾದಂದು ಮತ್ತು ಅಂದಿನಿಂದ ಈ ಅಧಿನಿಯಮವು ಸದರಿ ಅಧಿನಿಯಮದ ಮೂಲಕ ತಿದ್ದು ಪಡಿಯಾದಂತೆ ದೆಹಲಿಯ ಒಕ್ಕೂಟ ರಾಜ್ಯ ಕ್ಷೇತ್ರಕ್ಕೆ ವ್ಯಾಪ್ತವಾಗತಕ್ಕುದು ಮತ್ತು ಅಲ್ಲಿ ಜಾರಿಯಲ್ಲಿರತಕ್ಕುದು:

ಮತ್ತೂ ಪರಂತು, ರಸ್ತೆ ಸಾರಿಗೆ ನಿಗಮ (ತಿದ್ದುಪಡಿ) ಅಧಿನಿಯಮ, 1982 ಇದು ಪ್ರಾರಂಭವಾದಂದು ಮತ್ತು ಅಂದಿನಿಂದ ಸದರಿ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ, ಈ ಅಧಿನಿಯಮವು ಮಿಜೋರಾಂ ಒಕ್ಕೂಟ ರಾಜ್ಯ ಕ್ಷೇತ್ರಕ್ಕೆ ವ್ಯಾಪ್ತವಾಗತಕ್ಕುದು.

(3) ಅದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಒಂದು ರಾಜ್ಯಕ್ಕಾಗಿ ಈ ಬಗ್ಗೆ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಆ ರಾಜ್ಯದಲ್ಲಿ ಜಾರಿಗೆ ಬರತಕ್ಕುದು ಮತ್ತು ವಿವಿಧ ರಾಜ್ಯಗಳಿಗಾಗಿ ವಿವಿಧ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಹಾಯಕ ಸೇವೆ" ಎಂದರೆ ಒಂದು ನಿಗಮದ ಯಾವುದೇ ರಸ್ತೆ ಸಾರಿಗೆ ಸೇವೆಯನ್ನು ಬಳಸಿಕೊಳ್ಳುವ ವ್ಯಕ್ತಿಗಳಿಗೆ ಸೌಕರ್ಯಗಳನ್ನು ಅಥವಾ ಸೌಲಭ್ಯಗಳನ್ನು ಒದಗಿಸುವಂಥ ಯಾವುದೇ ಪೂರಕ ಸೇವೆ;

(ಎಎ) "ಮಂಡಲಿ" ಎಂದರೆ ನಿಗಮದ ನಿರ್ದೇಶಕರ ಮಂಡಲಿ;

(ಬಿ) "ನಿಗಮ" ಎಂದರೆ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ರಸ್ತೆ ಸಾರಿಗೆ ನಿಗಮ;

(ಬಿಬಿ) "ನಿರ್ದೇಶಕ" ಎಂದರೆ ಮಂಡಲಿಯ ಸದಸ್ಯ;

(ಸಿ) "ವಿಸ್ತರಿಸಿದ ಪ್ರದೇಶ" ಎಂದರೆ ನಿಗಮದ ಯಾವುದೇ ರಸ್ತೆ ಸಾರಿಗೆ ಸೇವೆಯ ಪ್ರವರ್ತನೆಯನ್ನು 20ನೇ ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ವಿಸ್ತರಿಸಲಾಗಿರುವಂಥ ಯಾವುದೇ ಪ್ರದೇಶ ಅಥವಾ ಮಾರ್ಗ;

(ಡಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಇ) "ರಸ್ತೆ ಸಾರಿಗೆ ಸೇವೆ" ಎಂದರೆ, ಬಾಡಿಗೆಗಾಗಿ ಅಥವಾ ಪ್ರತಿಫಲಕ್ಕಾಗಿ ವಾಹನಗಳಲ್ಲಿ ರಸ್ತೆಯ ಮೂಲಕ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಅಥವಾ ಅವೆರಡನ್ನೂ ಒಯ್ಯುವ ಸೇವೆ;

(ಎಫ್) "ವಾಹನ" ಎಂದರೆ ರಸ್ತೆ ಸಾರಿಗೆಯ ಉದ್ದೇಶಕ್ಕಾಗಿ ಬಳಸುವ ಅಥವಾ ಬಳಸಲು ಸಾಧ್ಯವಾಗಿರುವ ಯಾವುದೇ ಯಂತ್ರ ಚಾಲಿತ ವಾಹನಗಳು, ಮತ್ತು ಇದರಲ್ಲಿ ಟ್ರಾಮ್-ಕಾರ್, ಟ್ರಾಲಿವಾಹನ ಮತ್ತು ಟ್ರೈಲರ್ ಒಳಗೊಳ್ಳುತ್ತದೆ;

(ಜಿ) ಈ ಅಧಿನಿಯಮದಲ್ಲಿ ಬಳಸಿರುವ ಆದರೆ ಪರಿಭಾಷಿಸದೇ ಇರುವ ಪದಗಳು ಮತ್ತು ಪದಾವಳಿಯು, ಮೋಟಾರು ವಾಹನ ಅಧಿನಿಯಮ, 1939 (1939ರ 4)ರಲ್ಲಿ ಪರಿಭಾಷಿಸಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದು.

## ಅಧ್ಯಾಯ-II

## ರಸ್ತೆ ಸಾರಿಗೆ ನಿಗಮಗಳು

**3. ರಾಜ್ಯಗಳಲ್ಲಿ ರಸ್ತೆ ಸಾರಿಗೆ ನಿಗಮಗಳ ಸ್ಥಾಪನೆ.-** ರಾಜ್ಯ ಸರ್ಕಾರವು,-

(ಎ) ರಸ್ತೆ ಸಾರಿಗೆ ಅಭಿವೃದ್ಧಿಯು ಸಾರ್ವಜನಿಕರಿಗೆ, ವ್ಯಾಪಾರ ಮತ್ತು ಕೈಗಾರಿಕೆಗೆ ಕೊಡಮಾಡುವ ಅನುಕೂಲತೆಗಳನ್ನು;

(ಬಿ) ಯಾವುದೇ ಬಗೆಯ ರಸ್ತೆ ಸಾರಿಗೆಯನ್ನು ಯಾವುದೇ ಇತರ ಬಗೆಯ ಸಾರಿಗೆಯೊಂದಿಗೆ ಸಮನ್ವಯಗೊಳಿಸುವ ಅಪೇಕ್ಷಣೀಯತೆಯನ್ನು;

(ಸಿ) ಯಾವುದೇ ಪ್ರದೇಶದಲ್ಲಿನ ರಸ್ತೆ ಸಾರಿಗೆಗಾಗಿ ಸೌಲಭ್ಯಗಳನ್ನು ವಿಸ್ತರಿಸುವ ಮತ್ತು ಸುಧಾರಿಸುವ ಮತ್ತು ಅದರೊಳಗೆ ರಸ್ತೆ ಸಾರಿಗೆ ಸೇವೆಯ ದಕ್ಷ ಮತ್ತು ಆರ್ಥಿಕ ವ್ಯವಸ್ಥೆಯನ್ನು ಒದಗಿಸುವ ಅಪೇಕ್ಷಣೀಯತೆಯನ್ನು,

- ಗಮನದಲ್ಲಿಟ್ಟುಕೊಂಡು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಸರಿನ ಅಡಿಯಲ್ಲಿ ಇಡೀ ರಾಜ್ಯದ ಅಥವಾ ಅದರ ಯಾವುದೇ ಭಾಗಕ್ಕಾಗಿ ರಸ್ತೆ ಸಾರಿಗೆ ನಿಗಮವನ್ನು ಸ್ಥಾಪಿಸಬಹುದು.

**4. ನಿಗಮನ.-** ಪ್ರತಿಯೊಂದು ನಿಗಮವು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, 3ನೇ ಪ್ರಕರಣದ ಮೇರೆಗೆ ಅಧಿಸೂಚಿಸಲಾದ ಒಂದು ಹೆಸರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದು ಮತ್ತು ಅದು ಸದರಿ ಹೆಸರಿನಿಂದ ದಾವೆಯನ್ನು ಹೂಡತಕ್ಕದು ಮತ್ತು ದಾವೆಗೆ ಗುರಿಯಾಗತಕ್ಕದು.

**5. ನಿಗಮದ ವ್ಯವಸ್ಥಾಪನೆ ಮತ್ತು ನಿರ್ದೇಶಕ ಮಂಡಲಿ.**- (1) ನಿಗಮದ ಕಾರ್ಯಕಲಾಪಗಳು ಮತ್ತು ವ್ಯವಹಾರದ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯು ನಿರ್ದೇಶಕರ ಮಂಡಲಿಯಲ್ಲಿ ನಿಹಿತವಾಗಿರತಕ್ಕುದು, ಅದು ಅದರ ಸಮಿತಿಗಳ ಮತ್ತು ವ್ಯವಸ್ಥಾಪಕ ನಿರ್ದೇಶಕನ ಸಹಾಯದೊಂದಿಗೆ ನಿಗಮವು ಚಲಾಯಿಸಬಹುದಾದಂಥ ಎಲ್ಲಾ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಮಾಡಬಹುದಾದಂಥ ಎಲ್ಲಾ ಕೆಲಸಗಳು ಮತ್ತು ಕಾರ್ಯಗಳನ್ನು ಮಾಡಬಹುದು.

(2) ಮಂಡಲಿಯು, ರಾಜ್ಯ ಸರ್ಕಾರವು ನೇಮಕಮಾಡಲು ಯೋಗ್ಯವೆಂದು ಯೋಚಿಸಬಹುದಾದ ಒಬ್ಬ ಅಧ್ಯಕ್ಷನನ್ನು ಮತ್ತು ಐದಕ್ಕೆ ಕಡಿಮೆಯಿಲ್ಲದ ಮತ್ತು ಹದಿನೇಳನ್ನು ಮೀರದ ಅಂಥ ಇತರ ನಿರ್ದೇಶಕರನ್ನು ಒಳಗೊಂಡಿರತಕ್ಕುದು.

(3) ರಾಜ್ಯ ಸರ್ಕಾರವು, ಅದು ಹಾಗೆ ಸೂಕ್ತವೆಂದು ಯೋಚಿಸಿದರೆ, ಇತರ ನಿರ್ದೇಶಕರ ಲ್ಲೊಬ್ಬನನ್ನು ಮಂಡಲಿಯು ಉಪಾಧ್ಯಕ್ಷನೆಂದು ನೇಮಕ ಮಾಡಬಹುದು.

(4) ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಲ್ಲಿ, ಕೇಂದ್ರ ಮತ್ತು ರಾಜ್ಯ ಈ ಎರಡೂ ಸರ್ಕಾರಗಳು ಒಪ್ಪಬಹುದಾದಂಥ ಪ್ರಮಾಣದಲ್ಲಿ ಮಂಡಲಿಯಲ್ಲಿ ಕೇಂದ್ರ ಸರ್ಕಾರ ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರ ಇವೆರಡರ ಪ್ರಾತಿನಿಧ್ಯಕಾಗಿ ಮತ್ತು ಅದಕ್ಕೆ ಅದರದೇ ಆದ ಪ್ರತಿನಿಧಿಗಳನ್ನು ಪ್ರತಿಯೊಂದು ಸರ್ಕಾರವು ನೇಮಕ ಮಾಡುವ ಬಗ್ಗೆ ಉಪಬಂಧ ಮಾಡತಕ್ಕುದು ಮತ್ತು ನಿಗಮದ ಬಂಡವಾಳವನ್ನು 23ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಇತರ ಪಕ್ಷಕಾರರಿಗೆ ಷೇರುಗಳನ್ನು ಕೊಡುವ ಮೂಲಕ ಎತ್ತುವಲ್ಲಿ, ಮಂಡಲಿಯಲ್ಲಿ ಅಂಥ ಷೇರುದಾರರ ಪ್ರಾತಿನಿಧ್ಯಕ್ಕೆ ಮತ್ತು ಅಂಥ ಷೇರುದಾರರು ಆ ಪ್ರತಿನಿಧಿಗಳನ್ನು ಚುನಾಯಿಸತಕ್ಕಂಥ ರೀತಿಗಾಗಿಯೂ ಸಹ ಉಪಬಂಧ ಮಾಡತಕ್ಕುದು.

(5) ನಿರ್ದೇಶಕರ ಪದಾವಧಿಯು ಮತ್ತು ಅವರಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿಮಾಡುವ ರೀತಿಯು ನಿಯಮಿಸಬಹುದಾದಂಥದ್ದು ಆಗಿರತಕ್ಕುದು.

**6. ನಿಗಮದ ನಿರ್ದೇಶಕನೆಂದು ಆಯ್ಕೆಗೊಳ್ಳುವುದಕ್ಕಾಗಿ ಅಥವಾ ಹಾಗೆ ಇರುವುದಕ್ಕಾಗಿ ಅನರ್ಹತೆ.**- (1) ನಿಗಮದ ನಿರ್ದೇಶಕನೆಂದು ಆಯ್ಕೆಗೊಳ್ಳುವುದಕ್ಕಾಗಿ ಅಥವಾ ಹಾಗೆ ಇರುವುದಕ್ಕಾಗಿ ವ್ಯಕ್ತಿಯು-

(ಎ) ಮನೋವಿಕಲನಾಗಿರುವನೆಂದು ಅಥವಾ ಅಸ್ವಸ್ಥಚಿತ್ತನಾಗಿರುವ ವ್ಯಕ್ತಿಯಾಗಿರುವನೆಂದು ಕಂಡುಬಂದರೆ; ಅಥವಾ

(ಬಿ) ದಿವಾಳಿ ಎಂದು ನ್ಯಾಯನಿರ್ಣೀತನಾಗಿದ್ದರೆ; ಅಥವಾ

(ಸಿ) ನೈತಿಕ ಪತನವನ್ನು ಒಳಗೊಳ್ಳುವ ಅಪರಾಧದ ಬಗ್ಗೆ ಅವನು ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಅಥವಾ

(ಡಿ) ನಿಗಮನಗೊಂಡ ಕಂಪನಿಯಲ್ಲಿ ಷೇರುದಾರ (ನಿರ್ದೇಶಕನನ್ನು ಹೊರತುಪಡಿಸಿ) ನೆಂದಲ್ಲದೆ ನಿಗಮದೊಂದಿಗೆ ಮಾಡಿಕೊಂಡ ಯಾವುದೇ ಈಗಿರುವ ಕರಾರಿನಲ್ಲಿ ಅಥವಾ ಅದಕ್ಕಾಗಿ ಮಾಡಲಾಗುತ್ತಿರುವ ಯಾವುದೇ ಕೆಲಸದಲ್ಲಿ ಯಾವುದೇ ಹಿತಾಸಕ್ತಿಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹೊಂದಿದ್ದರೆ; ಪರಂತು, ಅವನು ಷೇರುದಾರನಾಗಿರುವಲ್ಲಿ ಅಂಥ ಕಂಪನಿಯಲ್ಲಿ ಅವನು ಹೊಂದಿರುವ ಷೇರುಗಳ ಸ್ವರೂಪ ಮತ್ತು

ವ್ಯಾಪ್ತಿಯನ್ನು ಆ ರಾಜ್ಯಸರ್ಕಾರಕ್ಕೆ ಅವನು ಬಹಿರಂಗಪಡಿಸತಕ್ಕುದು; ಅಥವಾ

(ಇ) ಯಾವುದೇ ಇತರ ರಸ್ತೆಸಾರಿಗೆ ಉದ್ಯಮದಲ್ಲಿ ಯಾವುದೇ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿದ್ದರೆ,

– ಅನರ್ಹಗೊಳ್ಳತಕ್ಕುದು.

(2) (1)ನೇ ಉಪ-ಪ್ರಕರಣದ (ಡಿ) ಖಂಡದಲ್ಲಿ ಇರುವುದು ಯಾವುದೂ, ನಿಗಮದ ವ್ಯವಸ್ಥಾಪಕ ನಿರ್ದೇಶಕನನ್ನು ಅದರ ನಿರ್ದೇಶಕನೆಂದು ಆಯ್ಕೆಗೊಳ್ಳುವುದಕ್ಕಾಗಿ, ಅಥವಾ ಹಾಗಿರುವುದಕ್ಕಾಗಿ ಅನರ್ಹಗೊಳಿಸುವುದೆಂದು ಭಾವಿಸತಕ್ಕುದಲ್ಲ.

(3) (1)ನೇ ಉಪ-ಪ್ರಕರಣದ (ಇ) ಖಂಡದಲ್ಲಿ ಇರುವುದು ಯಾವುದೂ,-

(ಎ) ಸರ್ಕಾರದ ಯಾವನೇ ಅಧಿಕಾರಿಯು ಅಥವಾ ಇತರ ಉದ್ಯೋಗಿಯು ನಿಗಮದ ನಿರ್ದೇಶಕನೆಂದು ಆಯ್ಕೆಗೊಳ್ಳುವುದಕ್ಕಾಗಿ ಅಥವಾ ಹಾಗಿರುವುದಕ್ಕಾಗಿ;

(ಬಿ) ನಿಗಮದ ಯಾವನೇ ಅಧಿಕಾರಿಯು ಅಥವಾ ಇತರ ಉದ್ಯೋಗಿಯು ಮತ್ತೊಂದು ನಿಗಮದ ನಿರ್ದೇಶಕನೆಂದು ಆಯ್ಕೆಗೊಳ್ಳುವುದಕ್ಕಾಗಿ, ಅಥವಾ ಹಾಗಿರುವುದಕ್ಕಾಗಿ-

- ಅನರ್ಹಗೊಳಿಸುವುದೆಂದು ಭಾವಿಸತಕ್ಕುದಲ್ಲ.

7. **ಅಧ್ಯಕ್ಷನಿಂದ ಅಥವಾ ನಿರ್ದೇಶಕನಿಂದ ಪದಕ್ಕೆ ರಾಜೀನಾಮೆ.--** ನಿಗಮದ ಅಧ್ಯಕ್ಷನು ಅಥವಾ ಯಾವನೇ ಇತರ ನಿರ್ದೇಶಕನು ರಾಜ್ಯ ಸರ್ಕಾರಕ್ಕೆ ಬರಹದಲ್ಲಿ ನೋಟಿಸನ್ನು ಕೊಡುವ ಮೂಲಕ ಅವನ ಪದಕ್ಕೆ ರಾಜೀನಾಮೆಯನ್ನು ಕೊಡಬಹುದು, ಮತ್ತು, ಅಂಥ ರಾಜೀನಾಮೆಯನ್ನು ರಾಜ್ಯಸರ್ಕಾರವು ಅಂಗೀಕರಿಸಿದ ಮೇಲೆ ಅವನು ಅವನ ಪದವನ್ನು ತೆರವುಮಾಡಿರುವುದಾಗಿ ಭಾವಿಸತಕ್ಕುದು.

**8. ಅಧ್ಯಕ್ಷನನ್ನು ಮತ್ತು ನಿರ್ದೇಶಕರನ್ನು ಪದದಿಂದ ತೆಗೆದುಹಾಕುವುದು.—** (1) ರಾಜ್ಯ ಸರ್ಕಾರವು,-

(ಎ) 6ನೇ ಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಅನರ್ಹತೆಗೆ ಒಳಗಾಗಿರುವ ಅಥವಾ ಒಳಗಾಗುವ; ಅಥವಾ

(ಬಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ಸಾಕಷ್ಟು ಕಾರಣವಿಲ್ಲದೆ ಮಂಡಲಿಯ ನಾಲ್ಕಕ್ಕಿಂತ ಹೆಚ್ಚು ನಿರಂತರ ಸಭೆಗಳಿಗೆ ಗೈರುಹಾಜರಾಗಿರುವ ನಿಗಮದ ಅಧ್ಯಕ್ಷನನ್ನು ಅಥವಾ ಯಾವನೇ ಇತರ ನಿರ್ದೇಶಕನನ್ನು ಪದದಿಂದ ತೆಗೆದುಹಾಕಬಹುದು:

ಪರಂತು, ಕೇಂದ್ರ ಸರ್ಕಾರವು ನೇಮಕ ಮಾಡಿದ ಯಾವನೇ ನಿರ್ದೇಶಕನನ್ನು ಆ ಸರ್ಕಾರದ ಸಹಮತಿ ಇಲ್ಲದೆ ಪದದಿಂದ ತೆಗೆದುಹಾಕತಕ್ಕುದಲ್ಲ.

(2) ರಾಜ್ಯಸರ್ಕಾರವು ಯಾವನೇ ನಿರ್ದೇಶಕನ ನೇಮಕವನ್ನು ನಿಯಮಿಸಬಹುದಾದಂಥ ಅವಧಿಯ (ಒಂದು ತಿಂಗಳಿಗಿಂತ ಕಡಿಮೆ ಇಲ್ಲದೆ ಇರುವ, ನೋಟೀಸನ್ನು ಅವನಿಗೆ ಕೊಟ್ಟ ತರುವಾಯ ಕೊನೆಗೊಳಿಸಬಹುದು.

ಪರಂತು, ಕೇಂದ್ರ ಸರ್ಕಾರವು ನೇಮಿಸಿದ ನಿರ್ದೇಶಕನ ನೇಮಕಾತಿಯನ್ನು ಆ ಸರ್ಕಾರದ ಸಹಮತಿಯಿಲ್ಲದೆ ಈ ಉಪ-ಪ್ರಕರಣದ ಮೇರೆಗೆ ಕೊನೆಗೊಳಿಸತಕ್ಕದ್ದಲ್ಲ.

**9. ಸದಸ್ಯರ ಖಾಲಿಸ್ಥಾನಗಳಿಂದಾಗಿ ಅಥವಾ ರಚನೆಯಲ್ಲಿನ ದೋಷವು ನಿಗಮದ ಅಥವಾ ಅದರ ಮಂಡಲಿಯ ಕೆಲಸಗಳನ್ನು ಅಥವಾ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕುದಲ್ಲ.-** ನಿಗಮದ ಅಥವಾ ಅದರ ಮಂಡಲಿಯ ಯಾವುದೇ ಕೆಲಸವನ್ನು ಅಥವಾ ವ್ಯವಹರಣೆಯನ್ನು ಮಂಡಲಿಯಲ್ಲಿನ ಯಾವುದೇ ಖಾಲಿಸ್ಥಾನವು ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವು ಇರುವ ಕಾರಣಮಾತ್ರದಿಂದಲೇ ಅಸಿಂಧುವಾಗತಕ್ಕುದಲ್ಲ.

**10. ನಿರ್ದಿಷ್ಟ ಉದ್ದೇಶಗಳಿಗಾಗಿ ಮಂಡಲಿಯೊಂದಿಗೆ ವ್ಯಕ್ತಿಗಳು ತಾತ್ಕಾಲಿಕವಾಗಿ ಜೊತೆಗೂಡುವುದು.-** (1) ಮಂಡಲಿಯು, ಯಾರ ಸಹಾಯವನ್ನು ಅಥವಾ ಸಲಹೆಯನ್ನು ಇಚ್ಛಿಸಬಹುದೋ ಆ ಯಾವನೇ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಜೊತೆಗೂಡಿಸಿಕೊಳ್ಳಬಹುದು.

(2) ಯಾವುದೇ ಉದ್ದೇಶಕ್ಕೆ (1)ನೇ ಉಪ-ಪ್ರಕರಣದ ಮೇರೆಗೆ ಮಂಡಲಿಯು ತನ್ನೊಂದಿಗೆ ಜೊತೆಗೂಡಿಸಿಕೊಂಡಿರುವ ವ್ಯಕ್ತಿಯು, ಆ ಉದ್ದೇಶಕ್ಕೆ ಸಂಬಂಧಪಟ್ಟ ಮಂಡಲಿಯ ಚರ್ಚೆಗಳಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರತಕ್ಕುದು, ಆದರೆ, ಮಂಡಲಿಯ ಸಭೆಯಲ್ಲಿ ಮತನೀಡುವ ಹಕ್ಕನ್ನು ಹೊಂದಿರತಕ್ಕುದಲ್ಲ.

**11. ಮಂಡಲಿಯ ಸಭೆಗಳು.--** (1) ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಮಂಡಲಿಯು ಸಭೆ ಸೇರತಕ್ಕುದು ಮತ್ತು ಅದು (2) ಮತ್ತು (3)ನೇ ಉಪ-ಪ್ರಕರಣಗಳ ಉಪಬಂಧಗಳಿಗೊಳಪಟ್ಟು ಅದರ ಸಭೆಗಳಲ್ಲಿನ ಕಾರ್ಯಕಲಾಪವನ್ನು ನಡೆಸುವ ಬಗ್ಗೆ ಅಂಥ ಕಾರ್ಯವಿಧಾನ ನಿಯಮಗಳನ್ನು ಪಾಲಿಸತಕ್ಕುದು:

ಪರಂತು, ಮಂಡಲಿಯು ಕನಿಷ್ಠ ಪಕ್ಷ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕುದು.

(2) ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸುವ ವ್ಯಕ್ತಿಯು, ಅದರ ಅಧ್ಯಕ್ಷನ ಅಥವಾ ಯಾವುದೇ ಸಭೆಯಲ್ಲಿ ಅವನ ಗೈರುಹಾಜರಿಯಲ್ಲಿ, ಉಪಾಧ್ಯಕ್ಷ ಯಾರಾದರೂ ಇದ್ದರೆ, ಅವನು ಅಥವಾ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇವರಿಬ್ಬರ ಗೈರುಹಾಜರಿಯಲ್ಲಿ, ಹಾಜರಿರುವ ನಿರ್ದೇಶಕರು ಸಭೆಯ ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡಬಹುದಾದಂಥ ನಿರ್ದೇಶಕ ಆಗಿರತಕ್ಕುದು.

(3) ಮಂಡಲಿಯ ಸಭೆಯಲ್ಲಿನ ತೀರ್ಮಾನಿಸಬೇಕಾದ ಎಲ್ಲಾ ವಿಷಯಗಳನ್ನು ಹಾಜರಿರುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದು ಮತ್ತು ಸಮಾನ ಮತಗಳ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರುಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸುವ ಯಾವನೇ ಇತರ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕುದು.

**12. ಸಮಿತಿಗಳನ್ನು ನೇಮಕ ಮಾಡುವ ಮತ್ತು ಪ್ರಕಾರ್ಯಗಳನ್ನು ವಹಿಸಿಕೊಡುವ ಅಧಿಕಾರ.–** (1) ಮಂಡಲಿಯು ಕಾಲಕಾಲಕ್ಕೆ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ–

(ಎ) ಆ ನಿರ್ಣಯದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ನಿರ್ದೇಶಕರನ್ನೊಳಗೊಂಡ ಸಮಿತಿಗಳನ್ನು ನೇಮಕ ಮಾಡಬಹುದು;

(ಬಿ) ಆ ನಿರ್ಣಯದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಅದು ಸೂಕ್ತವೆಂದು ಯೋಚಿಸುವಂಥ ಅದರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಯಾವುದೇ ಅಂಥ ಸಮಿತಿಗೆ ಅಥವಾ ಅಧ್ಯಕ್ಷನಿಗೆ ಅಥವಾ ಉಪಾಧ್ಯಕ್ಷನಿಗೆ ವಹಿಸಿಕೊಡಬಹುದು;

(ಸಿ) ಆ ನಿರ್ಣಯದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಅದರ ದೈನಂದಿನ ವ್ಯವಹಾರದ ದಕ್ಷ ನಿರ್ವಹಣೆಗಾಗಿ ಅದು ಅವಶ್ಯವೆಂದು ಭಾವಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸಲು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕನನ್ನು ಅಥವಾ ಯಾವನೇ ಇತರ ಅಧಿಕಾರಿಯನ್ನು ಅಧಿಕೃತಗೊಳಿಸಬಹುದು.

(2) ಅಧ್ಯಕ್ಷನು, ಉಪಾಧ್ಯಕ್ಷನು ಅಥವಾ ವ್ಯವಸ್ಥಾಪಕ ನಿರ್ದೇಶಕನು (1)ನೇ ಉಪ ಪ್ರಕರಣದ ಮೇರೆಗೆ ಅವನಿಗೆ ವಹಿಸಿಕೊಟ್ಟಿರುವ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಒಳಗೊಂಡು ಅವನ ಯಾವುದೇ ಅಧಿಕಾರವನ್ನು ಮತ್ತು ಕರ್ತವ್ಯವನ್ನು ನಿಗಮದ ಯಾವನೇ ಅಧಿಕಾರಿಗೆ ವಹಿಸಿಕೊಡಬಹುದು ಮತ್ತು ಯಾರಿಗೆ ಅಂಥ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ವಹಿಸಿಕೊಡಲಾಗಿದೆಯೋ ಆ ಅಧಿಕಾರಿಯು ಅಂಥ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ವ್ಯವಸ್ಥಾಪಕ ನಿರ್ದೇಶಕನ ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಅಡಿಯಲ್ಲಿ ಚಲಾಯಿಸತಕ್ಕುದು ಮತ್ತು ನೆರವೇರಿಸತಕ್ಕುದು.

**13. ಆದೇಶಗಳನ್ನು ಮತ್ತು ಇತರ ಲಿಖಿತಗಳನ್ನು ಅಧಿಪ್ರಮಾಣೀಕರಿಸುವುದು.–** ಮಂಡಲಿಯ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಕಾರ್ಯದರ್ಶಿಯ ರುಜುವಿನ ಮೂಲಕ ಅಥವಾ ಮಂಡಲಿಯು ಅಥವಾ 45ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಈ ಬಗ್ಗೆ ಅಧಿಕೃತಗೊಳಿಸಬಹುದಾದಂಥ ನಿಗಮದ ಯಾವನೇ ಇತರ ಅಧಿಕಾರಿಯು ಅಧಿಪ್ರಮಾಣೀಕರಿಸತಕ್ಕುದು ಮತ್ತು ಮಂಡಲಿಯು ಹೊರಡಿಸಿದ ಎಲ್ಲಾ ಇತರ ಲಿಖಿತಗಳನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕನ ಅಥವಾ ಈ ಬಗ್ಗೆ ಅಂಥದೇ ರೀತಿಯಲ್ಲಿ ಅಧಿಕೃತಗೊಳಿಸಿದ ಯಾವನೇ ಇತರ ಅಧಿಕಾರಿಯ ರುಜುವಿನ ಮೂಲಕ ಅಧಿಪ್ರಮಾಣೀಕರಿಸಿರತಕ್ಕುದು.

**14. ನಿಗಮದ ಅಧಿಕಾರಿಗಳು ಮತ್ತು ನೌಕರರು.–** (1) ಪ್ರತಿಯೊಂದು ನಿಗಮವು ರಾಜ್ಯಸರ್ಕಾರವು ನೇಮಕ ಮಾಡಿದ ವ್ಯವಸ್ಥಾಪಕ ನಿರ್ದೇಶಕನನ್ನು, ಮುಖ್ಯ ಲೆಕ್ಕಪತ್ರಾಧಿಕಾರಿಯನ್ನು ಮತ್ತು ಹಣಕಾಸು ಸಲಹೆಗಾರನನ್ನು ಹೊಂದಿರತಕ್ಕುದು:

ಪರಂತು, ಒಬ್ಬನೇ ವ್ಯಕ್ತಿಯನ್ನು ಮುಖ್ಯ ಲೆಕ್ಕಪತ್ರಾಧಿಕಾರಿ ಮತ್ತು ಹಣಕಾಸು ಸಲಹೆಗಾರನೆಂದು ನೇಮಕ ಮಾಡಬಹುದು.

(2) ನಿಗಮವು ಕಾರ್ಯದರ್ಶಿಯನ್ನು ಮತ್ತು ಅದರ ಪ್ರಕಾರ್ಯಗಳ ದಕ್ಷ ನೆರವೇರಿಕೆಗಾಗಿ ಅವಶ್ಯವೆಂದು ಅದು ಪರ್ಯಾಲೋಚಿಸುವಂತೆ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕಮಾಡಬಹುದು.

(3) ನಿಗಮದ ಅಧಿಕಾರಿಗಳ ಮತ್ತು ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು ಮತ್ತು ವೇತನಶ್ರೇಣಿಗಳು-

(ಎ) ವ್ಯವಸ್ಥಾಪಕ ನಿರ್ದೇಶಕನಿಗೆ, ಮುಖ್ಯ ಲೆಕ್ಕಪತ್ರಾಧಿಕಾರಿಗೆ ಮತ್ತು ಹಣಕಾಸು ಸಲಹೆಗಾರನಿಗೆ ಅಥವಾ ಸಂದರ್ಭಾನುಸಾರ ಮುಖ್ಯ ಲೆಕ್ಕಪತ್ರಾಧಿಕಾರಿಗೆ ಮತ್ತು ಹಣಕಾಸು ಸಲಹೆಗಾರನಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥವು ಆಗಿರತಕ್ಕದು; ಮತ್ತು

(ಬಿ) ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂಬಂಧಿಸಿದಂತೆ 34ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿರ್ಧರಿಸಬಹುದಾದಂಥವು ಆಗಿರತಕ್ಕದು.

**15. ವ್ಯವಸ್ಥಾಪಕ ನಿರ್ದೇಶಕ, ಮುಖ್ಯಲೆಕ್ಕಪತ್ರಾಧಿಕಾರಿ ಮತ್ತು ಹಣಕಾಸು ಸಲಹೆಗಾರ.-** (1) ವ್ಯವಸ್ಥಾಪಕ ನಿರ್ದೇಶಕನು ನಿಗಮದ ಕಾರ್ಯನಿರ್ವಾಹಕ ಮುಖ್ಯಸ್ಥನಾಗಿರತಕ್ಕದು ಮತ್ತು ನಿಗಮದ ಇತರ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ಅವನಿಗೆ ಅಧೀನರಾಗಿರತಕ್ಕದು.

(2) ವ್ಯವಸ್ಥಾಪಕ ನಿರ್ದೇಶಕನ ಮುಖ್ಯ ಲೆಕ್ಕಪತ್ರಾಧಿಕಾರಿಯು ಮತ್ತು ಹಣಕಾಸು ಸಲಹೆಗಾರನ ಅಥವಾ, ಸಂದರ್ಭಾನುಸಾರ, ಮುಖ್ಯ ಲೆಕ್ಕಪತ್ರಾಧಿಕಾರಿಯ ಮತ್ತು ಹಣಕಾಸು ಸಲಹೆಗಾರನ ಅಭಿಪ್ರಾಯಗಳನ್ನು, ನಿಗಮದ ರಾಜಸ್ವಗಳನ್ನು ಅಥವಾ ಅದರ ನಿಧಿಯಿಂದ ಮಾಡುವ ವೆಚ್ಚವನ್ನು ಒಳಗೊಂಡ ಪ್ರತಿಯೊಂದು ಪ್ರಸ್ತಾವನೆಯ ಬಗ್ಗೆ ಪಡೆದುಕೊಳ್ಳತಕ್ಕದು ಮತ್ತು ಅಂಥ ಅಭಿಪ್ರಾಯಗಳನ್ನು ಮಂಡಲಿಯು ಅಂಥ ಪ್ರಸ್ತಾವನೆಗಳನ್ನು ಪರ್ಯಾಲೋಚಿಸುವುದಕ್ಕೆ ಮುಂಚೆ ಮಂಡಲಿಯ ಮುಂದೆ ಇಡುವಂತೆ ಮಾಡತಕ್ಕದು.

**16. ಎಲ್ಲಾ ಅಧಿಕಾರಿಗಳು ಮತ್ತು ನೌಕರರ ಸಾಮಾನ್ಯ ಅನರ್ಹತೆ.-** ನಿಗಮದ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರಿನಲ್ಲಿ ಯಾವುದೇ ಇತರ ರಸ್ತೆ ಸಾರಿಗೆ ಉದ್ಯಮದಲ್ಲಿ, ಯಾವುದೇ ಪಾಲನ್ನು ಅಥವಾ ಹಿತಾಸಕ್ತಿಯನ್ನು ತಾನೇ ಸ್ವತಃ ಆಗಲಿ ಅಥವಾ ತನ್ನ ಪಾಲುದಾರನ ಅಥವಾ ಏಜೆಂಟನ ಮೂಲಕವೇ ಆಗಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹೊಂದಿರುವ ಯಾವನೇ ವ್ಯಕ್ತಿಯು ನಿಗಮದ ಅಧಿಕಾರಿ ಅಥವಾ ಇತರ ನೌಕರ ಆಗತಕ್ಕದಲ್ಲ ಅಥವಾ ಹಾಗೆ ಉಳಿಯತಕ್ಕದಲ್ಲ.

**17. ಸಲಹಾ ಪರಿಷತ್ತಿನ ನೇಮಕ.-** ರಾಜ್ಯಸರ್ಕಾರವು, ನಿಗಮದ ಅಭಿಪ್ರಾಯಗಳನ್ನು ಖಚಿತಪಡಿಸಿಕೊಂಡ ತರುವಾಯ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡ

ಅಂಥ ನಿಬಂಧನೆಗಳ ಮೇಲೆ ಮತ್ತು ಅಂಥ ವಿಷಯಗಳ ಬಗ್ಗೆ ನಿಗಮಕ್ಕೆ ಸಲಹೆಯನ್ನು ಕೊಡುವ ಉದ್ದೇಶಕ್ಕಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಸಲಹಾ ಪರಿಷತ್ತುಗಳನ್ನು ರಚಿಸಬಹುದು.

## ಅಧ್ಯಾಯ-IIಎ

## ಪೂರಕ ನಿಗಮಗಳು

**17ಎ. ಪೂರಕ ನಿಗಮಗಳ ಸ್ಥಾಪನೆ.-** (1) ನಿಗಮಕ್ಕೆ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಮೂಲ ನಿಗಮವೆಂದು ಉಲ್ಲೇಖಿಸಲಾಗಿದೆ) ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ಹೆಚ್ಚು ದಕ್ಷತೆಯಿಂದ ನಿರ್ವಹಿಸುವುದಕ್ಕಾಗಿ ಹಾಗೆ ಮಾಡುವುದು ವಿಹಿತ ಅಥವಾ ಅವಶ್ಯವೆಂದು ಮನದಟ್ಟಾಗಿರುವಲ್ಲಿ, ಅದು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸಹಮತಿಯೊಂದಿಗೆ ಸರ್ಕಾರಿ ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ ಒಂದು ಅಥವಾ ಅದಕ್ಕಿಂತ ಹೆಚ್ಚು ಪೂರಕ ನಿಗಮಗಳ ಸ್ಥಾಪನೆಗಾಗಿ ಅವಕಾಶ ಕಲ್ಪಿಸುವ ಯೋಜನೆಯನ್ನು ಅಥವಾ ಯೋಜನೆಗಳನ್ನು ರೂಪಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ರೂಪಿಸಿದ ಯೋಜನೆಯು, ಅದರ ಮೇರೆಗೆ ಸ್ಥಾಪಿತವಾಗತಕ್ಕಂಥ ಪೂರಕ ನಿಗಮವನ್ನು ಅಥವಾ ನಿಗಮಗಳನ್ನು, ಅವುಗಳನ್ನು ಹಾಗೆ ಸ್ಥಾಪಿಸತಕ್ಕಂಥ ದಿನಾಂಕವನ್ನು ಅಥವಾ ದಿನಾಂಕಗಳನ್ನು, ಅಂಥ ಪೂರಕ ನಿಗಮವು ಅಥವಾ ನಿಗಮಗಳು ಚಲಾಯಿಸಬಹುದಾದ ಮತ್ತು ನಿರ್ವಹಿಸಬಹುದಾದಂಥ ಮೂಲ ನಿಗಮದ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು, ಯಾವ ಷರತ್ತುಗಳು ಮತ್ತು ಪರಿಮಿತಿಗಳಿಗೊಳಪಟ್ಟು ಅಂಥ ಅಧಿಕಾರಗಳನ್ನು ಚಲಾಯಿಸಬಹುದೋ ಆ ಷರತ್ತುಗಳನ್ನು ಮತ್ತು ಪರಿಮಿತಿಗಳನ್ನು, ನಿರ್ದೇಶಕರ ಮಂಡಲಿಯ ಮೂಲಕ ಅಂಥ ಪ್ರತಿಯೊಂದು ಪೂರಕ ನಿಗಮದ ವ್ಯವಹಾರಗಳ ನಿರ್ವಹಣೆಯನ್ನು, ಅಂಥ ಪ್ರತಿಯೊಂದು ಪೂರಕ ನಿಗಮದ ಬಂಡವಾಳಕ್ಕೆ ಮತ್ತು ಮೂಲ ನಿಗಮಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿ ಯಾವುದಕ್ಕಾಗಿ ಉಪಬಂಧವನ್ನು ಮಾಡಲಾಗಿದೆಯೋ ಆ ವಿವಿಧ ವಿಷಯಗಳಿಗೆ ಸಂವಾದಿಯಾಗಿರುವಂಥ ಪೂರಕ ನಿಗಮಗಳಿಗೆ ಸಂಬಂಧಪಟ್ಟ ಎಲ್ಲಾ ಇತರ ವಿಷಯಗಳನ್ನು ನಿರ್ದಿಷ್ಟಪಡಿಸಿರತಕ್ಕುದು:

ಪರಂತು,-

(ಎ) ಯಾವುದೇ ಪೂರಕ ನಿಗಮವು ಮೂಲ ನಿಗಮದ ಪೂರ್ವಾನುಮೋದನೆಯಿಲ್ಲದೆ ಯಾವುದೇ ಹೊಸ ಮಾರ್ಗದ ಮೇಲೆ ಕಾರ್ಯಾಚರಣೆಯನ್ನು ಪ್ರಾರಂಭಿಸತಕ್ಕುದಲ್ಲ;

(ಬಿ) ಪೂರಕ ನಿಗಮದ ನಿರ್ದೇಶಕರ ಮಂಡಲಿಯಲ್ಲಿನ ಕೇಂದ್ರ ಸರ್ಕಾರದ ಪ್ರತಿನಿಧಿಗಳು, ಮೂಲ ನಿಗಮದ ಬಂಡವಾಳಕ್ಕೆ ಅದರ ವಂತಿಗೆಗೆ ಪ್ರಮಾಣಾನುಸಾರವಾಗಿ ಇರತಕ್ಕುದು;

(ಸಿ) ಪೂರಕ ನಿಗಮದ ಬಂಡವಾಳಕ್ಕೆ ಅಥವಾ ಮೂಲ ನಿಗಮಕ್ಕೆ ವಂತಿಗೆಯನ್ನು ಒದಗಿಸುವ ಕೇಂದ್ರ ಸರ್ಕಾರದ ಹೊಣೆಯನ್ನು ಕೇಂದ್ರ ಸರ್ಕಾರದ ಅನುಮೋದನೆ ಇಲ್ಲದೆ ಹೆಚ್ಚಿಸತಕ್ಕುದಲ್ಲ;

(ಡಿ) ಪೂರಕ ನಿಗಮವು ವ್ಯವಸ್ಥಾಪಕ ನಿರ್ದೇಶಕನನ್ನು, ಮುಖ್ಯ ಲೆಕ್ಕಪತ್ರಾಧಿಕಾರಿಯನ್ನು ಮತ್ತು ಹಣಕಾಸು ಸಲಹೆಗಾರನನ್ನು ಅಥವಾ

ಮುಖ್ಯ ಲೆಕ್ಕಪತ್ರಾಧಿಕಾರಿಯನ್ನು ಮತ್ತು ಹಣಕಾಸು ಸಲಹೆಗಾರನನ್ನು ಹೊಂದಿರತಕ್ಕುದು ಮತ್ತು ಅಂಥ ಅಧಿಕಾರಿಗಳನ್ನು ರಾಜ್ಯ ಸರ್ಕಾರವು ನೇಮಕ ಮಾಡತಕ್ಕುದು;

(ಇ) ರಾಜ್ಯ ಸರ್ಕಾರವು ಮತ್ತು ಮೂಲ ನಿಗಮವು, ಪೂರಕ ನಿಗಮದ ನೌಕರರ ನೇಮಕಾತಿ, ಸೇವಾ ಷರತ್ತುಗಳು ಮತ್ತು ತರಬೇತಿ, ಅಂಥ ನೌಕರರಿಗೆ ಸಂದಾಯ ಮಾಡಬೇಕಾದ ಮಜೂರಿಗಳು, ಪೂರಕ ನಿಗಮವು ಇಡಬೇಕಾದ ಮೀಸಲುಗಳು ಇವುಗಳನ್ನು ಒಳಗೊಂಡು ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪೂರಕ ನಿಗಮಕ್ಕೆ ನಿರ್ದೇಶನಗಳನ್ನು ಕೊಡುವ ಅಧಿಕಾರವನ್ನು ಹೊಂದಿರತಕ್ಕುದು.

(ಎಫ್) ಪೂರಕ ನಿಗಮದ ಬಂಡವಾಳ ಬಜೆಟ್, ರಾಜಸ್ವ ಬಜೆಟ್ ಮತ್ತು ವಾರ್ಷಿಕ ಅಭಿವೃದ್ಧಿ ಯೋಜನೆಗಳನ್ನು ಮೂಲ ನಿಗಮಕ್ಕೆ ಮತ್ತು ಅಂಥ ಬಜೆಟ್ ಅಥವಾ ಯೋಜನೆಯು ಯಾವುದೇ ಖೋತಾವನ್ನು ಒಳಗೊಂಡಿರುವಲ್ಲಿ ರಾಜ್ಯ ಸರ್ಕಾರಕ್ಕೂ ಸಹ ಅನುಮೋದನೆಗಾಗಿ ಒಪ್ಪಿಸತಕ್ಕುದು.

(3) (1)ನೇ ಉಪ-ಪ್ರಕರಣದ ಮೇರೆಗೆ ರೂಪಿಸಿರುವ ಯೋಜನೆಯ ಮೇರೆಗೆ ಸ್ಥಾಪಿಸಿದ ಪ್ರತಿಯೊಂದು ಪೂರಕ ನಿಗಮವು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಯೋಜನೆಯಲ್ಲಿ ನಿರ್ದಿಷ್ಟಪಡಿಸಿದ ಹೆಸರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕುದು ಮತ್ತು ಸದರಿ ಹೆಸರಿನಲ್ಲಿ ಅದು ದಾವೆಯನ್ನು ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

## ಅಧ್ಯಾಯ-III

## ನಿಗಮದ ಅಧಿಕಾರಗಳು ಮತ್ತು ಕರ್ತವ್ಯಗಳು

**18. ನಿಗಮದ ಸಾಮಾನ್ಯ ಕರ್ತವ್ಯ.-** ಯಾವ ರಾಜ್ಯಕ್ಕಾಗಿ ನಿಗಮವನ್ನು ಸ್ಥಾಪಿಸಲಾಗಿದೆಯೋ ಆ ರಾಜ್ಯದಲ್ಲಿ ಅಥವಾ ಅದರ ಭಾಗದಲ್ಲಿ ಮತ್ತು ಯಾವುದೇ ವಿಸ್ತರಿಸಿದ ಪ್ರದೇಶದಲ್ಲಿ ರಸ್ತೆ ಸಾರಿಗೆ ಸೇವೆಗಳ ದಕ್ಷ, ಪರ್ಯಾಪ್ತ, ಮಿತವ್ಯಯ ಮತ್ತು ಸರಿಯಾದ ಸುಸಂಘಟಿತ ವ್ಯವಸ್ಥೆಯನ್ನು ಒದಗಿಸಲು ಅಥವಾ ಅಂಥ ವ್ಯವಸ್ಥೆಯನ್ನು ಪಡೆದುಕೊಳ್ಳಲು ಅಥವಾ ವೃದ್ಧಿಪಡಿಸಲು, ಕ್ರಮೇಣ ಕ್ರಮೇಣ ಅದರ ಅಧಿಕಾರಗಳನ್ನು ಚಲಾಯಿಸುವುದು ನಿಗಮದ ಸಾಮಾನ್ಯ ಕರ್ತವ್ಯವಾಗಿರತಕ್ಕುದು:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾವುದಕ್ಕೆ ನಿಗಮವು ಅನ್ಯಥಾ ಒಳಪಡುವುದಿಲ್ಲವೋ ಆ ಯಾವುದೇ ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಮುಂದೆ ವ್ಯವಹರಣೆಗಳ ಮೂಲಕ ಜಾರಿಮಾಡಬಹುದಾದ ಯಾವುದೇ ಬಗೆಯ ಕರ್ತವ್ಯವನ್ನು ಅಥವಾ ಹೊಣೆಯನ್ನು ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಅದಕ್ಕೆ ವಿಧಿಸುವುದೆಂದು ಅರ್ಥೈಸತಕ್ಕುದಲ್ಲ.

**19. ನಿಗಮದ ಅಧಿಕಾರಗಳು.**- (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ನಿಗಮವು, -

(ಎ) ರಾಜ್ಯದಲ್ಲಿ ಮತ್ತು ಯಾವುದೇ ವಿಸ್ತರಿಸಿದ ಪ್ರದೇಶದಲ್ಲಿ ರಸ್ತೆ ಸಾರಿಗೆ ಸೇವೆಗಳನ್ನು ನಡೆಸುವ;

(ಬಿ) ಯಾವುದೇ ಸಹಾಯಕ ಸೇವೆಗಳನ್ನು ಒದಗಿಸುವ:

(ಸಿ) ಅದರ ನೌಕರರಿಗಾಗಿ ನ್ಯಾಯಯುತ ಮಜೂರಿಗಳು, ಭವಿಷ್ಯನಿಧಿಯ ಸ್ಥಾಪನೆ, ವಾಸಕ್ಕಾಗಿ ಸ್ಥಳಾವಕಾಶ, ವಿಶ್ರಾಂತಿ ಮತ್ತು ಮನರಂಜನೆಗಾಗಿ ಸ್ಥಳಗಳು ಮತ್ತು ಇತರ ಸೌಕರ್ಯಗಳು ಇವುಗಳನ್ನು ಒಳಗೊಂಡು ಸೇವೆಯ ಸೂಕ್ತ ಷರತ್ತುಗಳನ್ನು ಉಪಬಂಧಿಸುವ;

(ಡಿ) ಅದರ ನೌಕರರು ಅಥವಾ ಇತರ ವ್ಯಕ್ತಿಗಳಿಗೆ, ಉಚಿತವಾಗಿಯೇ ಆಗಲಿ ಅಥವಾ ರಿಯಾಯಿತಿ ದರಗಳಲ್ಲಿಯೇ ಆಗಲಿ ಅದು ವಿಧಿಸಲು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳ ಮೇಲೆ ಪಾಸುಗಳನ್ನು ಕೊಡಲು ಅಧಿಕೃತಗೊಳಿಸುವ;

(ಇ) ಉಪಯೋಗಿಸದೇ ಇರುವ ಟಿಕೆಟ್ಟುಗಳಿಗೆ ಮತ್ತು ರಿಯಾಯಿತಿ ಪಾಸುಗಳಿಗೆ ಸಂಬಂಧಿಸಿದಂತೆ ಮರುಪಾವತಿಯನ್ನು ಮಾಡಲು ಅಧಿಕೃತಗೊಳಿಸುವ

- ಅಧಿಕಾರವನ್ನು ಹೊಂದಿರತಕ್ಕುದು.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, (1)ನೇ ಉಪ-ಪ್ರಕರಣದ ಮೇರೆಗೆ ಪ್ರದಾನ ಮಾಡಿರುವ ಅಧಿಕಾರಗಳು-

(ಎ) ಚಲನಸಾಧನಗಳನ್ನು, ವಾಹನಗಳನ್ನು, ಉಪಕರಣಗಳನ್ನು, ಸ್ಥಾವರವನ್ನು, ಸಾಧನ ಸಾಮಗ್ರಿಗಳು ಅಥವಾ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ನಿಗಮದ ಯಾವುದೇ ಚಟುವಟಿಕೆಯ ಉದ್ದೇಶಕ್ಕಾಗಿ ಅಗತ್ಯವಾದ ಯಾವುದೇ ಇತರ ವಸ್ತುವನ್ನು ತಯಾರಿಸುವ, ಖರೀದಿಸುವ, ನಿರ್ವಹಿಸುವ ಮತ್ತು ದುರಸ್ತಿಮಾಡುವ,

**ವಿವರಣೆ:**- ಈ ಖಂಡದಲ್ಲಿ "ತಯಾರಿಕೆ" ಎಂಬ ಪದವು, ಪ್ರಾಯೋಗಿಕ ಅಥವಾ ಸಂಶೋಧನೆಯ ಉದ್ದೇಶಗಳಿಗಾಗಿ ಹೊರತು, ಮೋಟಾರು ವಾಹನದ ಪೂರ್ಣ ಘಟಕದ ನಿರ್ಮಾಣವನ್ನು ಒಳಗೊಳ್ಳುವುದಿಲ್ಲ;

(ಬಿ) ಸದರಿ ಯಾವುದೇ ಚಟುವಟಿಕೆಯ ಉದ್ದೇಶಕ್ಕಾಗಿ ನಿಗಮವು ಅವಶ್ಯವೆಂದು ಭಾವಿಸುವಂತೆ ಚರ ಮತ್ತು ಸ್ಥಿರ ಸ್ವತ್ತುಗಳನ್ನು ಆರ್ಜಿಸುವ ಮತ್ತು ಧಾರಣಮಾಡುವ ಮತ್ತು ಅದು ಧಾರಣಮಾಡಿರುವ ಯಾವುದೇ ಸ್ವತ್ತನ್ನು ಬಾಡಿಗೆಗೆ ಕೊಡುವ, ಮಾರಾಟಮಾಡುವ ಅಥವಾ ಅನ್ಯಥಾ ವರ್ಗಾವಣೆ ಮಾಡುವ;

(ಸಿ) ಸಂಬಂಧಪಟ್ಟ ರಾಜ್ಯದಲ್ಲಿ ಅಥವಾ ಯಾವುದೇ ವಿಸ್ತರಿಸಿದ ಪ್ರದೇಶದಲ್ಲಿ ಎಷ್ಟರಮಟ್ಟಿಗೆ ಅದರ ಚಟುವಟಿಕೆಗಳು ರಸ್ತೆಸಾರಿಗೆ ಸೇವೆಗಳ ಬಗ್ಗೆ ಕಾರ್ಯಚರಣೆಯನ್ನು ಒಳಗೊಂಡಿರುವುದೋ ಅಷ್ಟರಮಟ್ಟಿಗೆ, ಯಾವನೇ ಇತರ ವ್ಯಕ್ತಿಯ ಯಾವುದೇ ಉದ್ಯಮದ ಇಡೀ ಅಥವಾ ಯಾವುದೇ ಭಾಗವನ್ನು ನಿರುಪಾಧಿಕವಾಗಿಯಾಗಲಿ ಅಥವಾ ಯಾವುದೇ

ಅವಧಿಯವರೆಗಾಗಲಿ, ಆ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಆರ್ಜನಾ ಕಾನೂನಿಗೆ ಮತ್ತು ನಿಯಮಿಸಬಹುದಾದಂಥ ಪ್ರಕ್ರಿಯೆಗೆ ಅನುಸಾರವಾಗಿ ಒಪ್ಪಂದದ ಮೂಲಕವಾಗಿಯಾಗಲಿ ಅಥವಾ ಕಡ್ಡಾಯವಾಗಿಯಾಗಲಿ ಆರ್ಜಿಸುವುದಕ್ಕಾಗಿ ಯೋಜನೆಗಳನ್ನು ತಯಾರಿಸುವ ಮತ್ತು ಆರ್ಜಿಸುವ;

(ಡಿ) ಯಾವುದೇ ಭೂಮಿಯನ್ನು ಒಪ್ಪಂದದ ಮೂಲಕ ಖರೀದಿಸುವ ಅಥವಾ ಗೇಣಿಗೆ ಅಥವಾ ಯಾವುದೇ ಬಗೆಯ ಗೇಣಿಯ ಮೇರೆಗೆ ತೆಗೆದುಕೊಳ್ಳುವ ಮತ್ತು ಅದರ ಉದ್ಯಮವನ್ನು ನಡೆಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಕಟ್ಟಡಗಳನ್ನು ಅದರ ಮೇಲೆ ನಿರ್ಮಿಸುವ;

(ಇ) ಕೆಲಸಕ್ಕೆ ಬಾರದ ವಾಹನಗಳ, ಹಳೇ ಟೈರುಗಳ, ಉಪಯೋಗಿಸಿದ ತೈಲಗಳ, ಚೂರುಪಾರು ಮೌಲ್ಯದ ಯಾವುದೇ ಇತರ ದಾಸ್ತಾನುಗಳ, ಅಥವಾ ನಿಯಮಿಸಿದ ರೀತಿಯಲ್ಲಿ ಬಳಕೆಯಲ್ಲಿಲ್ಲದೆ ಇರುವುದಾಗಿ ಘೋಷಿಸಬಹುದಾದಂಥ ಇತರ ದಾಸ್ತಾನುಗಳ ವಿಲೆಯನ್ನು ಅಧಿಕೃತಗೊಳಿಸುವ;

(ಎಫ್) ಅಧಿನಿಯಮದ ಮೇರೆಗೆ ಅದರ ಕರ್ತವ್ಯಗಳನ್ನು ನೆರವೇರಿಸುವ ಮತ್ತು ಅದರ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಅವಶ್ಯಕವಾಗಬಹುದಾದಂಥ ಎಲ್ಲಾ ಕರಾರುಗಳನ್ನು ಮಾಡಿಕೊಳ್ಳುವ ಮತ್ತು ನೆರವೇರಿಸುವ;

(ಜಿ) ನಿಗಮವು ನಡೆಸುತ್ತಿರುವ ರಸ್ತೆ ಸಾರಿಗೆ ಸೇವೆಗಳಲ್ಲಿನ ಬಳಕೆಗಾಗಿ ಸೂಕ್ತವಾಗಬಹುದಾದಂಥ ಮಾದರಿಯ ವಾಹನಗಳನ್ನು ಖರೀದಿಸುವ;

(ಎಚ್) ನಿಗಮದ ಉದ್ಯಮದ ಉದ್ದೇಶಗಳಿಗಾಗಿ ಅದು ತನ್ನ ಉಪಯೋಗಕ್ಕಾಗಿ ವಾಹನಗಳನ್ನು, ಗ್ಯಾರೇಜುಗಳನ್ನು, ಷಡ್ಡುಗಳನ್ನು, ಕಚೇರಿ ಕಟ್ಟಡಗಳನ್ನು, ಡಿಪೋಗಳನ್ನು, ಭೂಮಿಯನ್ನು, ಕಾರ್ಯಾಗಾರಗಳನ್ನು, ಸಾಧನಸಾಮಗ್ರಿಗಳನ್ನು, ಉಪಕರಣಗಳನ್ನು, ವಾಹನಗಳಿಗೆ ಉಪಸಾಧನಗಳನ್ನು ಮತ್ತು ಅವುಗಳಿಗಾಗಿನ ಬಿಡಿಭಾಗಗಳನ್ನು, ಯಾವುದೇ ಇತರ ಉದ್ಯಮದ ಒಡೆಯನ ಒಡೆತನದಲ್ಲಿರುವ ಅಥವಾ ಅವನ ಸ್ವಾಧೀನದಲ್ಲಿರುವ ಯಾವುದೇ ಇತರ ವಸ್ತುಗಳನ್ನು ಒಪ್ಪಂದದ ಮೂಲಕ ಖರೀದಿಸುವ ಅಥವಾ ಪಡೆಯುವ;

(ಐ) ತರಬೇತಿಗಾಗಿ, ಶಿಕ್ಷಣಕ್ಕಾಗಿ ಮತ್ತು ಸಂಶೋಧನೆಗಾಗಿ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ನಿಗಮದ ವ್ಯವಸ್ಥೆಯನ್ನು ಮತ್ತು ಇತರರಿಗೆ ನಿಗಮವು ಕೊಟ್ಟ ಸಹಾಯವನ್ನು ಒಳಗೊಂಡು, ನಿಗಮವು ನಿಯೋಜಿಸಿಕೊಂಡಿರುವ ವ್ಯಕ್ತಿಗಳ ಕೌಶಲವನ್ನು ಅಥವಾ ನಿಗಮದ ಸಾಧನಸಾಮಗ್ರಿಗಳ ಕಾರ್ಯಸಮರ್ಥತೆಯನ್ನು ಅಥವಾ ಆ ಸಾಧನಸಾಮಗ್ರಿಗಳನ್ನು ಯಾವ ರೀತಿಯಲ್ಲಿ ಕಾರ್ಯಾಚರಣೆ ಗೊಳಿಸಬೇಕಾಗಿದೆಯೋ ಆ ರೀತಿಗಳನ್ನು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಯಾವುದೇ ಕಾರ್ಯವನ್ನು ಮಾಡುವ;

(ಜೆ) ಸೀದಾ ಪ್ರಯಾಣದರದ ಅಥವಾ ಸಾಗಣೆ ಬಾಡಿಗೆಯ ಪ್ರಕಾರ ಇತರ ವ್ಯಕ್ತಿಯು ನಿಗಮದ ಪರವಾಗಿ ಪ್ರಯಾಣಿಕರನ್ನು ಅಥವಾ ಸರಕುಗಳನ್ನು

ಒಯ್ಯುವುದಕ್ಕಾಗಿ ವ್ಯವಸ್ಥೆ ಮಾಡುವ, ಪ್ರಯಾಣಿಕರ ಅಥವಾ ಸರಕುಗಳ ವಾಹಕನೆಂದು ವ್ಯವಹಾರವನ್ನು ನಡೆಸುತ್ತಿರುವ ಯಾವನೇ ವ್ಯಕ್ತಿಯೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವ ಮತ್ತು ಅದನ್ನು ಈಡೇರಿಸುವ;

(ಕೆ) ಸರಕುಗಳ ರವಾನೆಗಾಗಿ, ದಾಸ್ತಾನಿಗಾಗಿ ಅಥವಾ ಒಪ್ಪಿಸಿಕೊಡುವುದಕ್ಕಾಗಿ ಸೌಲಭ್ಯಗಳನ್ನು ಒದಗಿಸುವ;

(ಎಲ್) ನಿಗಮದ ವಾಹನಗಳ ಮತ್ತು ಆವರಣಗಳ ಮೇಲೆ ಮತ್ತು ಅವುಗಳಲ್ಲಿ ಭಿತ್ತಿಪತ್ರಗಳ ಮತ್ತು ಜಾಹೀರಾತು ಫಲಕಗಳ ಪ್ರದರ್ಶನಕ್ಕಾಗಿ ಮತ್ತು ಸಾರ್ವಜನಿಕರಿಗೆ ನಿಗಮವು ಕೊಡುವ ಟಿಕೆಟ್ಟುಗಳ ಮತ್ತು ಇತರ ನಮೂನೆಗಳ ಮೇಲಿನ ಜಾಹಿರಾತುಗಳಿಗೂ ಸಹ ಕರಾರುಗಳನ್ನು ಮಾಡಿಕೊಳ್ಳುವ;

(ಎಂ) ರಾಜ್ಯಸರ್ಕಾರದ ಪೂರ್ವಾನುಮೋದನೆಯೊಂದಿಗೆ ನಿಗಮದ ವ್ಯವಹಾರಗಳನ್ನು ಸರಿಯಾಗಿ ನಡೆಸುವುದನ್ನು ಅನುವುಗೊಳಿಸಲು ಎಲ್ಲಾ ಇತರ ಕಾರ್ಯಗಳನ್ನು ಮಾಡುವ

- ಅಧಿಕಾರಗಳನ್ನು ಒಳಗೊಂಡಿರತಕ್ಕುದು.

(3) ಈ ಪ್ರಕರಣದಲ್ಲಿ ಇರುವುದು ಯಾವುದನ್ನೂ, ರಾಜ್ಯ ಸರ್ಕಾರದ ಪೂರ್ವಾನು ಮೋದನೆಯಿಲ್ಲದೆ-

(i) ನಿಗಮದ ಉದ್ಯಮದ ಉದ್ದೇಶಕ್ಕಾಗಿ, ಬಳಕೆಗಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಗತ್ಯವಾಗಿಲ್ಲದೆ ಇರುವಂಥ ಯಾವುದನ್ನಾದರೂ ತಯಾರಿಸುವುದು ಅಥವಾ ನಿರ್ವಹಿಸುವುದು ಅಥವಾ ನಿಗಮಕ್ಕೆ ಸೇರಿಲ್ಲದ ಅಥವಾ ಅದರ ಉದ್ಯಮದ ಉದ್ದೇಶಕ್ಕಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಉಪಯೋಗಿಸಿಲ್ಲದೆ ಇರುವಂಥ ಯಾವುದೇ ವಾಹನವನ್ನು ದುರಸ್ತಿ ಮಾಡುವುದು, ದಾಸ್ತಾನು ಮಾಡುವುದು ಅಥವಾ ಅದರ ಉಪಯೋಗಕ್ಕಾಗಿ ಸಜ್ಜುಗೊಳಿಸಲು;

(ii) ಇತರ ವ್ಯಕ್ತಿಗೆ ಮಾರಾಟದ ಉದ್ದೇಶಕ್ಕಾಗಿ ಯಾವುದೇ ವಾಹನವನ್ನು ಖರೀದಿಸಲು;

(iii) ವಾಹನಗಳಿಗಾಗಿ ಮೃದುಚಾಲಕಗಳನ್ನು, ಬಿಡಿಭಾಗಗಳನ್ನು ಅಥವಾ ಸಾಧನಸಾಮಗ್ರಿಗಳನ್ನು ಅಥವಾ ಅವುಗಳಿಗೆ ಉಪಸಾಧನಗಳನ್ನು ಯಾವನೇ ವ್ಯಕ್ತಿಗೆ ಮಾರಾಟ ಮಾಡಲು ಅಥವಾ ಸರಬರಾಜು ಮಾಡಲು;

(iv) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಪಷ್ಟವಾಗಿ ಉಪಬಂಧಿಸಿದಂತೆ ಹೊರತು ಪ್ರಯಾಣಿಕರ ಅಥವಾ ಸರಕುಗಳ ಸಾಗಣೆಗಾಗಿ ಬಾಡಿಗೆಗೆ ವಾಹನಗಳನ್ನು ಕೊಡಲು -

- ನಿಗಮವನ್ನು ಅಧಿಕೃತಗೊಳಿಸುವುದೆಂದು ಅರ್ಥೈಸತಕ್ಕುದಲ್ಲ.

(4) ಈ ಅಧಿನಿಯಮದ ಮೂಲಕ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಹಿಂದೆ ಹೇಳಿದ ಉಪಬಂಧಗಳಲ್ಲಿ ಇರುವುದು ಯಾವುದನ್ನೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನನ್ನು ಗಣನೆಗೆ ತೆಗೆದುಕೊಳ್ಳದಂತೆ ನಿಗಮವನ್ನು ಅಧಿಕೃತಗೊಳಿಸುವುದೆಂದು ಅರ್ಥೈಸತಕ್ಕುದಲ್ಲ.

(5) ಯಾವನೇ ಇತರ ವ್ಯಕ್ತಿಯ ಇಡೀ ಉದ್ಯಮವನ್ನು ಅಥವಾ ಅದರ ಯಾವದೇ ಭಾಗವನ್ನು ನಿಗಮವು ಆರ್ಜಿಸುವಲ್ಲಿ ನಿಗಮವು, ಅದರ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನೇಮಕ ಮಾಡುವಲ್ಲಿ ಆ ಉದ್ಯಮದಲ್ಲಿ ನಿಯೋಜಿಸಿಕೊಂಡಿರುವ ನೌಕರರ ಕ್ಲೇಮುಗಳನ್ನು ಪರ್ಯಾಲೋಚಿಸತಕ್ಕುದು.

(6) ಈ ಪ್ರಕರಣದ ಉಪಬಂಧಗಳನ್ನು, ಈ ಅಧಿನಿಯಮದ ಯಾವುದೇ ತರುವಾಯದ ಉಪಬಂಧದ ಮೂಲಕ ಅಥವಾ ಅದರ ಮೇರೆಗೆ ಪ್ರದಾನ ಮಾಡಿದ ನಿಗಮದ ಯಾವುದೇ ಅಧಿಕಾರವನ್ನು ಸೀಮಿತಗೊಳಿಸುವುದೆಂದು ಅರ್ಥೈಸತಕ್ಕುದಲ್ಲ.

**20. ನಿಗಮದ ರಸ್ತೆ ಸಾರಿಗೆ ಸೇವೆಯ ಕಾರ್ಯಾಚರಣೆಯನ್ನು ಇನ್ನೊಂದು ರಾಜ್ಯದೊಳಗಿನ ಪ್ರದೇಶಗಳಿಗೆ ವಿಸ್ತರಿಸುವುದು.–** (1) ನಿಗಮವು ಸಾರ್ವಜನಿಕ ಹಿತಾಸಕ್ತಿಯಲ್ಲಿ, ಅದರ ಯಾವುದೇ ರಸ್ತೆ ಸಾರಿಗೆ ಸೇವೆಯ ಕಾರ್ಯಾಚರಣೆಯನ್ನು ಇನ್ನೊಂದು ರಾಜ್ಯದೊಳಗಿರುವ ಯಾವುದೇ ಮಾರ್ಗಕ್ಕೆ ಅಥವಾ ಪ್ರದೇಶಕ್ಕೆ ವಿಸ್ತರಿಸುವುದು ವಿಹಿತವಾಗಿದೆ ಎಂದು ಪರ್ಯಾಲೋಚಿಸಿದರೆ, ಅದು ರಾಜ್ಯ ಸರ್ಕಾರದ ಪೂರ್ವಾನುಮತಿ ಪಡೆದು ಪ್ರಸ್ತಾವಿತ ವಿಸ್ತರಣೆಯ ಬಗ್ಗೆ ಆ ಇನ್ನೊಂದು ರಾಜ್ಯದ ಸರ್ಕಾರದೊಂದಿಗೆ ವ್ಯವಹರಿಸಬಹುದು.

(2) ಆ ಇನ್ನೊಂದು ರಾಜ್ಯದ ಸರ್ಕಾರವು ಆ ಪ್ರಸ್ತಾವಿತ ವಿಸ್ತರಣೆಯನ್ನು ಅನುಮೋದಿಸಿದರೆ ನಿಗಮವು ಆ ಉದ್ದೇಶಕ್ಕಾಗಿ ಯೋಜನೆಯನ್ನು ಸಿದ್ಧಪಡಿಸತಕ್ಕುದು ಮತ್ತು ಅದನ್ನು ಆ ಇನ್ನೊಂದು ರಾಜ್ಯಕ್ಕೆ ಅದರ ಸಮ್ಮತಿಗಾಗಿ ಕಳುಹಿಸತಕ್ಕುದು, ಮತ್ತು ಅಂಥ ಸಮ್ಮತಿಯನ್ನು ಸ್ವೀಕರಿಸಿದ ತರುವಾಯ ಆ ಯೋಜನೆಯನ್ನು ನಿಗಮವು ಮಂಜೂರು ಮಾಡಬಹುದು.

(3) ಆ ಯೋಜನೆಯನ್ನು ಹಾಗೆ ಮಂಜೂರು ಮಾಡಿದ ತರುವಾಯ, ನಿಗಮಕ್ಕೆ ಅದರ ರಸ್ತೆ ಸಾರಿಗೆ ಸೇವೆಯ ಕಾರ್ಯಾಚರಣೆಯನ್ನು ವಿಸ್ತರಿಸುವುದು ಸಕ್ಷಮವಾಗಿರತಕ್ಕುದು, ಮತ್ತು ಅಂಥ ಸೇವೆಯ ಕಾರ್ಯಾಚರಣೆಯನ್ನು ಹಾಗೆ ವಿಸ್ತರಿಸಿದಾಗ ನಿಗಮವು ಆ ಸೇವೆಯನ್ನು ಆ ಮಾರ್ಗದಲ್ಲಿ ಅಥವಾ ಆ ಪ್ರದೇಶದಲ್ಲಿ, ಯಾವ ಇನ್ನೊಂದು ರಾಜ್ಯದಲ್ಲಿ ಅಂಥ ಮಾರ್ಗವು ಅಥವಾ ಪ್ರದೇಶವು ಇರುವುದೋ ಆ ಇನ್ನೊಂದು ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು ನಡೆಸತಕ್ಕುದು.

(4) ನಿಗಮವು, ಕಾಲಕಾಲಕ್ಕೆ (2)ನೇ ಉಪ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಯೋಜನೆಯನ್ನು ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಸಿದ್ಧಪಡಿಸಿದ ಮತ್ತು ಮಂಜೂರು ಮಾಡಿದ ಪೂರಕ ಯೋಜನೆಯ ಮೂಲಕ ಬದಲಾಯಿಸಬಹುದು ಅಥವಾ ವಿಸ್ತರಿಸಬಹುದು.

**21. ಅಂಚೆಯ ಸಾಗಣೆ.**– ಮೋಟಾರು ವಾಹನಗಳ ಅಧಿನಿಯಮ, 1939 (1939ರ 4)ರಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು ಹಾಗೆ ಅಗತ್ಯಪಡಿಸಿದರೆ ನಿಗಮವು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ದರಗಳಲ್ಲಿ ಮತ್ತು ಅಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ಅಂಚೆಯನ್ನು ಸಾಗಿಸತಕ್ಕುದು.

## ಅಧ್ಯಾಯ–IV

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**22. ನಿಗಮದ ಹಣಕಾಸಿನ ಬಗ್ಗೆ ಸಾಮಾನ್ಯ ತತ್ವ.**– ನಿಗಮದ ಉದ್ಯಮವನ್ನು ನಡೆಸುವಲ್ಲಿ ಅದು, ವ್ಯವಹಾರದ ತತ್ವಗಳ ಮೇಲೆ ಕಾರ್ಯ ನಿರ್ವಹಿಸುವುದು ಅದರ ಸಾಮಾನ್ಯ ತತ್ವವಾಗಿರತಕ್ಕುದು.

**23. ನಿಗಮದ ಬಂಡವಾಳ.**– (1) ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರಗಳು, ರಾಜ್ಯ ಸರ್ಕಾರವು ಸ್ಥಾಪಿಸಿದ ನಿಗಮಕ್ಕೆ, ಆ ಎರಡೂ ಸರ್ಕಾರಗಳು ಒಪ್ಪಬಹುದಾದಂಥ ಪ್ರಮಾಣದಲ್ಲಿ, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಆ ಉದ್ಯಮವನ್ನು ನಡೆಸುವ ಉದ್ದೇಶಕ್ಕಾಗಿ, ಅಥವಾ ಅದಕ್ಕೆ ಸಂಬಂಧಿಸಿದ ಉದ್ದೇಶಗಳಿಗಾಗಿ ಯಾವುದೇ ಬಂಡವಾಳವನ್ನು ಒದಗಿಸಬಹುದು.

(2) ನಿಗಮವು, (1)ನೇ ಉಪ–ಪ್ರಕರಣದ ಮೇರೆಗೆ ಅದಕ್ಕೆ ಯಾವುದೇ ಬಂಡವಾಳವನ್ನು ಒದಗಿಸಿರಲಿ ಅಥವಾ ಇಲ್ಲದೆ ಇರಲಿ ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಬಹುದಾದಂಥ ಬಂಡವಾಳವನ್ನು (ಇನ್ನು ಮುಂದೆ ಈ ಪ್ರಕರಣದಲ್ಲಿ "ಅಧಿಕೃತಗೊಳಿಸಿದ ಷೇರು ಬಂಡವಾಳ" ವೆಂದು ಉಲ್ಲೇಖಿಸಲಾಗಿದೆ) ಷೇರುಗಳನ್ನು ಕೊಡುವ ಮೂಲಕ ಎತ್ತಬಹುದು:

ಪರಂತು, (1)ನೇ ಉಪ–ಪ್ರಕರಣದ ಮೇರೆಗೆ ನಿಗಮಕ್ಕೆ ಯಾವುದೇ ಬಂಡವಾಳವನ್ನು ಒದಗಿಸಿರುವಲ್ಲಿ ಈ ಉಪಪ್ರಕರಣದ ಮೇರೆಗೆ ಯಾವುದೇ ಬಂಡವಾಳವನ್ನು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ಎತ್ತತಕ್ಕುದಲ್ಲ.

(2ಎ) ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, (2)ನೇ ಉಪ–ಪ್ರಕರಣದ ಮೇರೆಗೆ ಎತ್ತಿದ ಯಾವುದೇ ಬಂಡವಾಳವು–

(ಎ) (1)ನೇ ಉಪ–ಪ್ರಕರಣದ ಮೇರೆಗೆ ನಿಗಮಕ್ಕೆ ಒದಗಿಸಿದ ಬಂಡವಾಳದ ಜೊತೆಗೆ ಇರಬಹುದು;

(ಬಿ) ಸಂದರ್ಭಾನುಸಾರ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು (1)ನೇ ಉಪ–ಪ್ರಕರಣದ ಮೇರೆಗೆ ಆ ಸರ್ಕಾರವು ನಿಗಮಕ್ಕೆ, ಸಾರಿಗೆ ನಿಗಮ (ತಿದ್ದುಪಡಿ) ಅಧಿನಿಯಮ, 1982 ರಪ್ರಾರಂಭಕ್ಕೆ ಮುಂಚೆ ಅಥವಾ ಆ ತರುವಾಯ ಒದಗಿಸಿರುವ ಇಡೀ ಬಂಡವಾಳವನ್ನು ಅಥವಾ

ಅದರ ಯಾವುದೇ ಭಾಗವನ್ನು ಪರಿವರ್ತಿಸುವ ಮೂಲಕ ಒದಗಿಸಬಹುದು.

(3) ನಿಗಮದ ಅಧಿಕೃತಗೊಳಿಸಿದ ಷೇರು ಬಂಡವಾಳವನ್ನು ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ಸಂಖ್ಯೆಯ ಷೇರುಗಳನ್ನಾಗಿ ವಿಂಗಡಿಸತಕ್ಕುದು; ಮತ್ತು ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರವು ಮತ್ತು ಇತರ ಪಕ್ಷಕಾರರು (ನಿಗಮವು ಯಾರ ಉದ್ಯಮಗಳನ್ನು ಆರ್ಜಿಸಿದೆಯೋ ಆ ವ್ಯಕ್ತಿಗಳನ್ನೂ ಒಳಗೊಂಡು) ಒದಗಿಸಿರತಕ್ಕಂಥ ಷೇರುಗಳ ಸಂಖ್ಯೆಯನ್ನು ಸಹ ಕೇಂದ್ರ ಸರ್ಕಾರದೊಡನೆ ಸಮಾಲೋಚಿಸಿ ರಾಜ್ಯ ಸರ್ಕಾರವು ನಿರ್ಧರಿಸತಕ್ಕುದು.

(4) (3)ನೇ ಉಪ-ಪ್ರಕರಣದಲ್ಲಿ ನಮೂದಿಸಿರುವ ಇತರ ಪಕ್ಷಕಾರರಿಗೆ ನಿಯಮಿಸ ಬಹುದಾದಂಥ ರೀತಿಯಲ್ಲಿ ನಿಗಮವು ಷೇರುಗಳ ಹಂಚಿಕೆಯನ್ನು ಮಾಡತಕ್ಕುದು.

(5) ನಿಗಮದ ಷೇರುಗಳನ್ನು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಗನುಸಾರವಾಗಿ ಅಲ್ಲದೆ, ವರ್ಗಾಯಿಸತಕ್ಕುದಲ್ಲ.

(6) ನಿಗಮವು, ಯಾವ ಕಾಲದಲ್ಲಿ, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ನಿಯಮಿಸಬಹುದಾದಂಥ ರೀತಿಯಲ್ಲಿ (4)ನೇ ಉಪ-ಪ್ರಕರಣದ ಮೇರೆಗೆ ಇತರ ಪಕ್ಷಕಾರರಿಗೆ ಕೊಟ್ಟಿರುವ ಷೇರುಗಳನ್ನು ವಿಮೋಚನೆಮಾಡಿಕೊಳ್ಳಬಹುದು.

**24. ನಿಗಮದ ಹೆಚ್ಚಿನ ಬಂಡವಾಳ.-** 23ನೇ ಪ್ರಕರಣದ ಮೇರೆಗೆ ಷೇರುಗಳನ್ನು ಕೊಟ್ಟ ತರುವಾಯ ನಿಗಮಕ್ಕೆ ಯಾವುದೇ ಹೆಚ್ಚಿನ ಬಂಡವಾಳದ ಅಗತ್ಯತೆ ಇದ್ದರೆ, ನಿಗಮವು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಅಂಥ ಹೆಚ್ಚಿನ ಬಂಡವಾಳವನ್ನು ಹೊಸ ಷೇರುಗಳನ್ನು ಕೊಡುವ ಮೂಲಕ ಎತ್ತಬಹುದು ಮತ್ತು ಸದರಿ ಪ್ರಕರಣದ (2), (2ಎ), (3), (4), (5) ಮತ್ತು (6)ನೇ ಉಪ-ಪ್ರಕರಣಗಳ ಉಪಬಂಧಗಳು ಅಂಥ ಷೇರುಗಳನ್ನು ಕೊಡುವುದಕ್ಕೆ ಅನ್ವಯವಾಗತಕ್ಕುದು.

**25. ರಾಜ್ಯ ಸರ್ಕಾರದಿಂದ ಖಾತರಿ.-** ನಿಗಮದ ಷೇರುಗಳಿಗೆ, ಅಸಲಿನ ಸಂದಾಯ ಮತ್ತು ಆ ಷೇರುಗಳನ್ನು ಕೊಡುವ ಕಾಲದಲ್ಲಿ ರಾಜ್ಯಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯ ಮೂಲಕ ನಿಗದಿಪಡಿಸಬಹುದಾದಂಥ ಕನಿಷ್ಠ ದರದಲ್ಲಿ ವಾರ್ಷಿಕ ಡಿವಿಡೆಂಡನ್ನು ಸಂದಾಯ ಮಾಡುವ ಬಗ್ಗೆ ರಾಜ್ಯಸರ್ಕಾರವು ಖಾತರಿಯನ್ನು ಒದಗಿಸತಕ್ಕುದು.

**26. ಸಾಲ ತೆಗೆದುಕೊಳ್ಳುವ ಬಗ್ಗೆ ಅಧಿಕಾರಗಳು.-** ನಿಗಮವು, ರಾಜ್ಯಸರ್ಕಾರದ ಪೂರ್ವಾನು ಮೋದನೆಯೊಂದಿಗೆ, ಅದರ ಕಾರ್ಯಾರ್ಥ ಬಂಡವಾಳವನ್ನು ಎತ್ತುವ ಅಥವಾ ಬಂಡವಾಳ ಸ್ವರೂಪದ ವೆಚ್ಚವನ್ನು ಭರಿಸುವ ಉದ್ದೇಶಕ್ಕಾಗಿ ಬಹಿರಂಗ ಮಾರುಕಟ್ಟೆಯಲ್ಲಿ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ 5)ರ 3ನೇ ಪ್ರಕರಣದ ಮೇರೆಗೆ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ,

1980 (1980ರ 40)ರ 3ನೇ ಪ್ರಕರಣದ ಮೇರೆಗೆ ರಚಿಸಿರುವ ಹೊಸ ಸಂವಾದಿ ಬ್ಯಾಂಕಿನಿಂದ, ರಾಜ್ಯ ಹಣಕಾಸು ನಿಗಮ ಅಧಿನಿಯಮ, 1951 (1951ರ 63)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾಗಿರುವ ರಾಜ್ಯ ಹಣಕಾಸು ನಿಗಮದಿಂದ, ಕೈಗಾರಿಕಾ ಹಣಕಾಸು ನಿಗಮ ಅಧಿನಿಯಮ, 1948 (1948ರ 15)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾಗಿರುವ ಭಾರತ ಕೈಗಾರಿಕಾ ಹಣಕಾಸು ನಿಗಮದಿಂದ, 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾಗಿರುವ ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನಿಂದ್ ಜೀವವಿಮಾ ನಿಗಮ ಅಧಿನಿಯಮ, 1956 (1956ರ 31)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿರುವ ಭಾರತ ಜೀವ ವಿಮಾ ನಿಗಮದಿಂದ ಅಥವಾ ಭಾರತ ರಿಸರ್ವ್ ಬ್ಯಾಂಕಿನ ನಿಯಂತ್ರಣಕ್ಕೆ ಒಳಪಟ್ಟಿದ್ದು ಸಾಲವನ್ನು ಒದಗಿಸುವ ಯಾವುದೇ ಇತರ ಹಣಕಾಸು ಸಂಸ್ಥೆಯಿಂದ ಹಣವನ್ನು ಸಾಲವಾಗಿ ಪಡೆಯಬಹುದು.

**27. ನಿಗಮದ ನಿಧಿ.-** (1) ಪ್ರತಿಯೊಂದು ನಿಗಮವು, ಅದರದೇ ಆದ ನಿಧಿಯನ್ನು ಹೊಂದಿರತಕ್ಕುದು ಮತ್ತು ನಿಗಮದ ಎಲ್ಲಾ ಸ್ವೀಕೃತಿಗಳನ್ನು ಅದಕ್ಕೆ ಜಮೆಮಾಡತಕ್ಕುದು ಮತ್ತು ನಿಗಮವು ಮಾಡುವ ಎಲ್ಲಾ ಸಂದಾಯಗಳನ್ನು ಆ ನಿಧಿಯಿಂದ ಮಾಡತಕ್ಕುದು.

(2) ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದಂತೆ ಹೊರತು, ಆ ನಿಧಿಗೆ ಸೇರಿದ ಎಲ್ಲಾ ಹಣಗಳನ್ನು ಭಾರತ ರಿಸರ್ವ್ ಬ್ಯಾಂಕ್‌ನಲ್ಲಿ ಅಥವಾ ಭಾರತ ರಿಸರ್ವ್ ಬ್ಯಾಂಕಿನ ಏಜೆಂಟರುಗಳಲ್ಲಿ, ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ 5)ರ 3ನೇ ಪ್ರಕರಣದ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ ,1980 (1980ರ 4)ರ 3ನೇ ಪ್ರಕರಣದ ಮೇರೆಗೆ ರಚಿಸಿರುವ ಬ್ಯಾಂಕುಗಳಲ್ಲಿ ಠೇವಣಿಯಿಡತಕ್ಕುದು ಅಥವಾ ರಾಜ್ಯ ಸರ್ಕಾರವು ಅನುಮೋದಿಸಬಹುದಾದಂಥ ಭದ್ರತೆಗಳಲ್ಲಿ ಹೂಡತಕ್ಕುದು.

**28. ಬಡ್ಡಿ ಮತ್ತು ಡಿವಿಡೆಂಡಿನ ಸಂದಾಯ.-** (1) ನಿಗಮದ ಇಡೀ ಬಂಡವಾಳವನ್ನು ಅಥವಾ ಅದರ ಭಾಗವನ್ನು 23ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರಗಳು ಒದಗಿಸಿರುವಲ್ಲಿ, ನಿಗಮವು ಅಂಥ ಬಂಡವಾಳದ ಮೇಲೆ ಕಾಲಕಾಲಕ್ಕೆ, ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡತಕ್ಕುದು ಮತ್ತು ಅಂಥ ಬಡ್ಡಿಯು ನಿಗಮದ ವೆಚ್ಚದ ಭಾಗವಾಗಿರುವುದಾಗಿ ಭಾವಿಸತಕ್ಕುದು.

(2) ಷೇರುಗಳನ್ನು ಕೊಡುವುದರ ಮೂಲಕ ತನ್ನ ಇಡೀ ಬಂಡವಾಳವನ್ನು ಅಥವಾ ಅದರ ಭಾಗವನ್ನು ನಿಗಮವು ಹೆಚ್ಚಿಸಿದಲ್ಲಿ, ಅದು, ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರವು ವಿಧಿಸಲಾಗಿರುವಂಥ ಯಾವುದೇ ಸಾಮಾನ್ಯ ಪರಿಮಿತಿಗಳಿಗೊಳಪಟ್ಟು ಕಾಲಕಾಲಕ್ಕೆ ನಿಗಮವು ನಿಗದಿಪಡಿಸಬಹುದಾದಂಥ ದರದಲ್ಲಿ ಅಂಥ ಷೇರುಗಳ ಬಗ್ಗೆ ಡಿವಿಡೆಂಡನ್ನು ಸಂದಾಯ ಮಾಡತಕ್ಕುದು.

**29. ಇಳಿತಾಯ ಮತ್ತು ಮೊಸಲು ಮತ್ತು ಇತರ ನಿಧಿಗಳಿಗೆ ವ್ಯವಸ್ಥೆ.-** (1) ನಿಗಮವು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂತೆ ಇಳಿತಾಯಕ್ಕಾಗಿ ಮತ್ತು ಮೊಸಲು ಮತ್ತು ಇತರ ನಿಧಿಗಳಿಗಾಗಿ ಅಂಥ ವ್ಯವಸ್ಥೆಗಳನ್ನು ಮಾಡತಕ್ಕುದು.

(2) ಸದರಿ ನಿಧಿಗಳ ವ್ಯವಸ್ಥಾಪನೆ, ಕಾಲಕಾಲಕ್ಕೆ ಅದರ ಜಮೆಗೆ ಒಯ್ಯಬೇಕಾಗಿರುವ ಮೊತ್ತಗಳನ್ನು ಮತ್ತು ಅದರಲ್ಲಿ ಒಳಗೊಂಡಿರುವ ಹಣಗಳ ವಿನಿಯೋಗವನ್ನು ನಿಗಮವು ನಿರ್ಧರಿಸತಕ್ಕದು:

ಪರಂತು, ಯಾವುದೇ ನಿಧಿಯನ್ನು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ಯಾವುದಕ್ಕಾಗಿ ಅದನ್ನು ಸೃಜಿಸಲಾಗಿತ್ತೋ ಅದನ್ನು ಹೊರತುಪಡಿಸಿ ಯಾವುದೇ ಇತರ ಉದ್ದೇಶಕ್ಕಾಗಿ ಬಳಸತಕ್ಕದಲ್ಲ.

**30. ನಿವ್ವಳ ಲಾಭಗಳ ವಿಲೆ.-** 28ನೇ ಪ್ರಕರಣದ ಮೇರೆಗೆ ಬಡ್ಡಿಯ ಮತ್ತು ಡಿವಿಡೆಂಡಿನ ಸಂದಾಯಕ್ಕಾಗಿ ಮತ್ತು 29ನೇ ಪ್ರಕರಣದ ಮೇರೆಗಿನ ಇಳಿತಾಯ, ಮೀಸಲು ಮತ್ತು ಇತರ ನಿಧಿಗಳಿಗಾಗಿ ವ್ಯವಸ್ಥೆಯನ್ನು ಮಾಡಿದ ತರುವಾಯ ನಿಗಮವು ಆ ರಾಜ್ಯ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತೆ ಅದರ ವಾರ್ಷಿಕ ನಿವ್ವಳ ಲಾಭಗಳ ಅಂಥ ಶೇಕಡವಾರನ್ನು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ರಸ್ತೆ ಸಾರಿಗೆ ಸೇವೆಗಳನ್ನು ಬಳಸುವ ಪ್ರಯಾಣಿಕರಿಗೆ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ, ನಿಗಮವು ನಿಯೋಜಿಸಿಕೊಂಡಿರುವ ಕಾರ್ಮಿಕರ ಕಲ್ಯಾಣಕ್ಕಾಗಿ ಮತ್ತು ಅಂಥ ಇತರ ಉದ್ದೇಶಗಳಿಗಾಗಿ ಉಪಯೋಗಿಸಬಹುದು, ಮತ್ತು ಶಿಲ್ಕಿನಿಂದ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ನಿಗಮವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಮೊಬಲಗನ್ನು ನಿಗಮದ ವಿಸ್ತೃತ ಕಾರ್ಯಕ್ರಮಗಳಿಗೆ ಹಣಕಾಸನ್ನು ಒದಗಿಸುವುದಕ್ಕಾಗಿ ಬಳಸಬಹುದು ಮತ್ತು ಉಳಿದಿರುವುದು ಯಾವುದಾದರೂ ಇದ್ದರೆ ಅದನ್ನು ರಸ್ತೆ ಅಭಿವೃದ್ಧಿಯ ಉದ್ದೇಶಕ್ಕಾಗಿ ಆ ರಾಜ್ಯ ಸರ್ಕಾರಕ್ಕೆ ಒಪ್ಪಿಸಿ ಕೊಡತಕ್ಕದು.

**31. ಖರ್ಚು ಮಾಡಲು ನಿಗಮದ ಅಧಿಕಾರ.-** ನಿಗಮವು, ಈ ಅಧಿನಿಯಮದ ಮೇರೆಗೆ ಅಧಿಕೃತಗೊಳಿಸಿದ ಉದ್ದೇಶಗಳ ಬಗ್ಗೆ ಅದು ಸೂಕ್ತವೆಂದು ಯೋಚಿಸುವಂಥ ಮೊತ್ತಗಳನ್ನು ಖರ್ಚು ಮಾಡಲು ಅಧಿಕಾರವನ್ನು ಹೊಂದಿರತಕ್ಕದು ಮತ್ತು ಅಂಥ ಮೊತ್ತಗಳನ್ನು ನಿಗಮದ ನಿಧಿಯಿಂದ ಸಂದಾಯ ಮಾಡಬೇಕಾದ ವೆಚ್ಚವೆಂದು ಪರಿಗಣಿಸತಕ್ಕದು.

**32. ಬಜೆಟ್.-** (1) ಪ್ರತಿಯೊಂದು ನಿಗಮವು, ಪ್ರತಿಯೊಂದು ವರ್ಷದಲ್ಲಿ, ನಿಯಮಿಸಬಹುದಾದಂಥ ದಿನಾಂಕದೊಳಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಆ ಹಣಕಾಸು ವರ್ಷದಲ್ಲಿನ ಅಂದಾಜು ಜಮೆಗಳನ್ನು ಮತ್ತು ವೆಚ್ಚವನ್ನು ತೋರಿಸುವ ಮುಂದಿನ ಹಣಕಾಸು ವರ್ಷದ ಬಜೆಟ್‌ನ್ನು ತಯಾರಿಸತಕ್ಕದು ಮತ್ತು ಅದನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದು.

(2) (3) ಮತ್ತು (4)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾವುದೇ ಮೊತ್ತವನ್ನು, ಅದರ ವೆಚ್ಚವು ರಾಜ್ಯ ಸರ್ಕಾರವು ಅನುಮೋದಿಸಿರುವ ಚಾಲ್ತಿ ಬಜೆಟ್ ಅನುದಾನದಲ್ಲಿ ಒಳಗೊಂಡಿದ್ದ ಹೊರತು, ನಿಗಮವು ಅಥವಾ ಅದರ ಪರವಾಗಿ ಖರ್ಚು ಮಾಡತಕ್ಕದಲ್ಲ.

(3) ರಾಜ್ಯಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ನಿಗಮವು ಒಟ್ಟು ಬಜೆಟ್ ಅನುದಾನವನ್ನು ಮೀರದ ಷರತ್ತಿಗೆ ಒಳಪಟ್ಟು ಅನುದಾನದ ಮಿತಿಯೊಳಗೆ ವೆಚ್ಚದ ಒಂದು ಶೀರ್ಷಿಕೆಯಿಂದ ಮತ್ತೊಂದಕ್ಕೆ ಅಥವಾ ಒಂದು ಯೋಜನೆಗಾಗಿ ಮಾಡಿದ ವ್ಯವಸ್ಥೆಯಿಂದ ಇನ್ನೊಂದಕ್ಕೆ ಸಂಬಂಧಿಸಿದಂತೆ ಯಾವುದೇ ಪುನರ್ ವಿನಿಯೋಗವನ್ನು ಮಂಜೂರು ಮಾಡಬಹುದು.

(4) ನಿಗಮವು, ನಿಯಮಿಸಬಹುದಾದಂಥ ಪರಿಮಿತಿಗಳೊಳಗೆ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ವೆಚ್ಚದ ಯಾವುದೇ ಶೀರ್ಷಿಕೆಯ ಅಡಿಯಲ್ಲಿ ಅಥವಾ ಯಾವುದೇ ನಿರ್ದಿಷ್ಟ ಯೋಜನೆಗೆ ಸಂಬಂಧಿಸಿದಂತೆ ರಾಜ್ಯಸರ್ಕಾರವು ಅನುಮೋದಿಸಿರುವ ಬಜೆಟ್‌ನಲ್ಲಿ ಒದಗಿಸಿರುವ ಪರಿಮಿತಿಯನ್ನು ಮೀರಿ ವೆಚ್ಚವನ್ನು ವಹಿಸಬಹುದು.

**33. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.-** (1) ನಿಗಮವು, ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ಇಡತಕ್ಕುದು ಮತ್ತು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ನೊಂದಿಗೆ ಸಮಾಲೋಚಿಸಿ ರಾಜ್ಯಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಲಾಭ ಮತ್ತು ನಷ್ಟದ ಲೆಕ್ಕವನ್ನು ಒಳಗೊಂಡು ಲೆಕ್ಕಪತ್ರಗಳ ವಾರ್ಷಿಕ ವಿವರಪತ್ರವನ್ನು ಮತ್ತು ಆಯವ್ಯಯ ಪಟ್ಟಿಯನ್ನು ತಯಾರಿಸತಕ್ಕುದು.

(2) ನಿಗಮದ ಲೆಕ್ಕಪತ್ರಗಳನ್ನು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ನು ಅಥವಾ ಅವನಿಂದ ನಾಮನಿರ್ದೇಶಿತನಾದವನು ಪ್ರತಿವರ್ಷ ಪರಿಶೋಧಿಸತಕ್ಕುದು ಮತ್ತು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಅವನು ವಹಿಸಿದ ಯಾವುದೇ ವೆಚ್ಚವನ್ನು ನಿಗಮವು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ನಿಗೆ ಸಂದಾಯ ಮಾಡತಕ್ಕುದು.

(3) ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ನು ಮತ್ತು ನಿಗಮದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಅವನಿಂದ ನೇಮಕಗೊಂಡ ಯಾವನೇ ಇತರ ವ್ಯಕ್ತಿಯು, ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸರ್ಕಾರಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ಲನು ಹೊಂದಿರುವಂಥವೇ ಹಕ್ಕುಗಳನ್ನು, ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕುದು ಮತ್ತು, ಅದರಲ್ಲೂ ಮುಖ್ಯವಾಗಿ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಪಟ್ಟ ಓಚರುಗಳನ್ನು, ಇತರ ದಸ್ತಾವೇಜುಗಳನ್ನು ಮತ್ತು ಕಾಗದಪತ್ರಗಳನ್ನು ಹಾಜರು ಪಡಿಸಲು ತಗಾದೆ ಮಾಡುವ ಮತ್ತು ನಿಗಮದ ಯಾವುದೇ ಕಚೇರಿಯನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕುದು.

(4) ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ಲನು ಅಥವಾ ಈ ಬಗ್ಗೆ ಅವನಿಂದ ನೇಮಕಗೊಂಡ ಯಾವನೇ ವ್ಯಕ್ತಿಯು ಪ್ರಮಾಣೀಕರಿಸಿದಂತೆ ನಿಗಮದ ಲೆಕ್ಕಪತ್ರಗಳನ್ನು ಅದರ ಬಗೆಗಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಪ್ರತಿವರ್ಷ ರಾಜ್ಯಸರ್ಕಾರಕ್ಕೆ ಕಳುಹಿಸತಕ್ಕುದು; ಮತ್ತು ಆ ಸರ್ಕಾರವು ಅದನ್ನು ರಾಜ್ಯದ ವಿಧಾನಮಂಡಲದ ಮುಂದೆ ಇಡುವಂತೆ ಮಾಡತಕ್ಕುದು.

## ಅಧ್ಯಾಯ-V

## ಸಂಕೀರ್ಣ

**34. ರಾಜ್ಯಸರ್ಕಾರದಿಂದ ನಿರ್ದೇಶನ.-** (1) ರಾಜ್ಯಸರ್ಕಾರವು, ಅಂಥ ಸರ್ಕಾರವು ಸ್ಥಾಪಿಸಿರುವ ನಿಗಮದೊಂದಿಗೆ ಸಮಾಲೋಚಿಸಿದ ತರುವಾಯ, ನಿಗಮವು ಅನುಸರಿಸಬೇಕಾದ ಸಾಮಾನ್ಯ ಸೂಚನೆಗಳನ್ನು ನಿಗಮಕ್ಕೆ ಕೊಡಬಹುದು ಮತ್ತು ಅಂಥ ಸೂಚನೆಗಳಿಗೆ, ನೌಕರಿ ಭರ್ತಿಗೆ, ಸೇವಾ ಷರತ್ತುಗಳಿಗೆ ಮತ್ತು ಅದರ ನೌಕರರ ತರಬೇತಿಗೆ, ಆ ನೌಕರರಿಗೆ ಸಂದಾಯಮಾಡಬೇಕಾದ ಮಜೂರಿಗಳಿಗೆ, ಅದು ಇಟ್ಟುಕೊಂಡುಬರಬೇಕಾದ ಮೀಸಲುಗಳ ಮತ್ತು ಅದರ ಲಾಭಗಳ ಮತ್ತು ಸ್ಟಾಕುಗಳ ವಿಲೆಗೆ ಸಂಬಂಧಪಟ್ಟ ನಿರ್ದೇಶನಗಳನ್ನು ಒಳಗೊಳ್ಳಬಹುದು.

(2) ಈ ಅಧಿನಿಯಮದ ಮೇರೆಗೆ ನಿಗಮವು ತನ್ನ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಅದರ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಅದು, ರಾಜ್ಯಸರ್ಕಾರದ ಪೂರ್ವಾನುಮತಿಯಿಂದ ಹೊರತು, (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿರುವ ಯಾವುದೇ ಸಾಮಾನ್ಯ ಸೂಚನೆಗಳನ್ನು ಪಾಲಿಸದೆ ಇರತಕ್ಕುದಲ್ಲ.

**35. ವಿವರ ಪಟ್ಟಿಕೆಗಳು ಮತ್ತು ವರದಿಗಳು.-** (1) ಪ್ರತಿಯೊಂದು ನಿಗಮವು, ಅದರ ಸ್ವತ್ತು ಅಥವಾ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅಥವಾ ಯಾವುದೇ ಪ್ರಸ್ತಾವಿತ ಯೋಜನೆಯ ಬಗ್ಗೆ ಕಾಲಕಾಲಕ್ಕೆ ರಾಜ್ಯಸರ್ಕಾರವು ಅಗತ್ಯಪಡಿಸಬಹುದಾದಂಥ ವಿವರ ಪಟ್ಟಿಕೆಗಳನ್ನು, ಅಂಕಿಅಂಶಗಳನ್ನು, ಲೆಕ್ಕಪತ್ರಗಳನ್ನು ಮತ್ತು ಇತರ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕುದು.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ನಿಗಮವು, ಪ್ರತಿ ಹಣಕಾಸು ವರ್ಷವು ಮುಕ್ತಾಯಗೊಂಡ ತರುವಾಯ ಆದಷ್ಟು ಬೇಗ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಆ ವರ್ಷದಲ್ಲಿ ಈ ಅಧಿನಿಯಮದ ಮೇರೆಗೆ ಅದರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅದು ಚಲಾಯಿಸಿದ ಮತ್ತು ನೆರವೇರಿಸಿದ ಬಗ್ಗೆ ಮತ್ತು ಅದರ ಕಾರ್ಯನೀತಿಯ ಮತ್ತು ಕಾರ್ಯಕ್ರಮಗಳ ಬಗ್ಗೆ ವರದಿಯನ್ನು ಒಪ್ಪಿಸತಕ್ಕುದು.

(3) ರಾಜ್ಯಸರ್ಕಾರವು (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವ ವಾರ್ಷಿಕ ವರದಿಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇಡುವಂತೆ ಮಾಡತಕ್ಕುದು.

**36. ವಿಚಾರಣೆಗಳನ್ನು ಆದೇಶಮಾಡುವ ಅಧಿಕಾರ.-** (1) ರಾಜ್ಯಸರ್ಕಾರವು, ಆ ಸರ್ಕಾರವು ಸ್ಥಾಪಿಸಿರುವ ನಿಗಮದ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಸರಿಯಾಗಿ ಚಲಾಯಿಸಲಾಗುತ್ತಿದೆ ಮತ್ತು ನೆರವೇರಿಸಲಾಗುತ್ತಿದೆ ಎಂಬುದನ್ನು ಅದು ಮನದಟ್ಟು ಮಾಡಿಕೊಳ್ಳುವ ದೃಷ್ಟಿಯಿಂದ ಯಾವುದೇ ಕಾಲದಲ್ಲಿ ಯಾವನೇ ವ್ಯಕ್ತಿ, ಅಥವಾ ವ್ಯಕ್ತಿಗಳನ್ನು ನಿಗಮದ ಎಲ್ಲಾ ಅಥವಾ ಯಾವುದೇ ಕಾರ್ಯಚಟುವಟಿಕೆಯ ಬಗ್ಗೆ ವಿಚಾರಣೆಗಳನ್ನು ಮಾಡಲು ಮತ್ತು ಅಂಥ ವಿಚಾರಣೆಗಳ ಫಲಿತಾಂಶವನ್ನು ರಾಜ್ಯಸರ್ಕಾರಕ್ಕೆ ವರದಿ ಮಾಡಲು ನೇಮಿಸಬಹುದು.

(2) ನಿಗಮವು ಹಾಗೆ ನೇಮಕಗೊಂಡ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಆ ವಿಚಾರಣೆಗಳನ್ನು ಸರಿಯಾಗಿ ನಡೆಸುವುದಕ್ಕಾಗಿ ಎಲ್ಲಾ ಸೌಲಭ್ಯಗಳನ್ನು ಕೊಡತಕ್ಕದು ಮತ್ತು ಆ ವ್ಯಕ್ತಿಯ ಅಥವಾ ವ್ಯಕ್ತಿಗಳ ಮುಂದೆ ಆ ವಿಚಾರಣೆಗಳ ಉದ್ದೇಶಗಳಿಗಾಗಿ ಅಂಥ ವ್ಯಕ್ತಿಯು ಅಥವಾ ವ್ಯಕ್ತಿಗಳು ತಗಾದೆ ಮಾಡುವಂಥ ನಿಗಮದ ಸ್ವಾಧೀನದಲ್ಲಿರುವ ಯಾವುದೇ ದಸ್ತಾವೇಜನ್ನು, ಲೆಕ್ಕವನ್ನು ಅಥವಾ ಮಾಹಿತಿಯನ್ನು ಹಾಜರ್ಪಡಿಸತಕ್ಕದು ಅಥವಾ ಒದಗಿಸತಕ್ಕದು.

**37. ನಿಗಮದ ಉದ್ಯಮದ ಒಂದು ಭಾಗವನ್ನು ನಿಯಂತ್ರಿಸುವ ಅಧಿಕಾರ.–** (1) 36ನೇ ಪ್ರಕರಣದ ಮೇರೆಗೆ ನಡೆಸಿದ ವಿಚಾರಣೆಯ ಯಾವುದೇ ವರದಿಯನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ ಆ ರಾಜ್ಯ ಸರ್ಕಾರಕ್ಕೆ ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯವೆಂದು ಮನದಟ್ಟಾದರೆ, ರಾಜ್ಯಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಉದ್ಯಮದ ಭಾಗವನ್ನು ನಿಗಮದಿಂದ ವಶಪಡಿಸಿಕೊಳ್ಳಲು ಮತ್ತು ಆ ಅಧಿಸೂಚನೆಯು ಜಾರಿಯಲ್ಲಿರುವವರೆಗೆ ರಾಜ್ಯಸರ್ಕಾರವು ಕಾಲಕಾಲಕ್ಕೆ ಕೊಡಬಹುದಾದಂಥ ನಿರ್ದೇಶನಗಳಿಗೆ ಅನುಸಾರವಾಗಿ ಅದನ್ನು ನಡೆಸಲು ಯಾವನೇ ವ್ಯಕ್ತಿಯನ್ನು ಅಧಿಕೃತಗೊಳಿಸಬಹುದು ಮತ್ತು ಹಾಗೆ ಅಧಿಕೃತಗೊಳಿಸಿರುವ ಯಾವನೇ ವ್ಯಕ್ತಿಯು ಆ ಉದ್ಯಮದ ಸದರಿ ಭಾಗದ ಬಗ್ಗೆ ಹಾಗೆ ಅದನ್ನು ನಡೆಸುವ ಉದ್ದೇಶಕ್ಕಾಗಿ ಈ ಅಧಿನಿಯಮದ ಮೇರೆಗೆ ನಿಗಮದ ಅಥವಾ ನಿಗಮದ ಯಾವನೇ ಅಧಿಕಾರಿಯ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸಬಹುದು ಅಥವಾ ಅವನು ಸೂಕ್ತವೆಂದು ಯೋಚಿಸುವಂಥ ನಿರ್ದೇಶನಗಳನ್ನು ನಿಗಮದ ಅಧಿಕಾರಿಗಳಿಗೆ ಅಥವಾ ಇತರ ನೌಕರರಿಗೆ ಕೊಡಬಹುದು ಮತ್ತು ಯಾವುದೇ ಹೊರಗಿನ ಏಜೆನ್ಸಿಯನ್ನು ನಿಯೋಜಿಸಿಕೊಳ್ಳಬಹುದು.

(2) ರಾಜ್ಯ ಸರ್ಕಾರವು, ಅಂಥ ಅಧಿಸೂಚನೆಯ ಮೂಲಕ ಹಾಗೆ ಅಧಿಕೃತಗೊಳಿಸಿರುವ ವ್ಯಕ್ತಿಯು ವಹಿಸಿದ ಎಲ್ಲಾ ಚಾರ್ಜುಗಳು ಮತ್ತು ವೆಚ್ಚಗಳನ್ನು ಅಂಥ ವ್ಯಕ್ತಿಗೆ ಕಾಲಕಾಲಕ್ಕೆ ರಾಜ್ಯ ಸರ್ಕಾರವು ಅವಕಾಶ ಮಾಡಿಕೊಡಬಹುದಾದಂಥ ಸಂಭಾವನೆಯೊಂದಿಗೆ ಆ ನಿಗಮದ ನಿಧಿಯಿಂದ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ಕಾಲದೊಳಗೆ ಸಂದಾಯ ಮಾಡತಕ್ಕದೆಂದು ನಿರ್ದೇಶಿಸಬಹುದು, ಮತ್ತು ಆ ವೆಚ್ಚಗಳನ್ನು ಹಾಗೆ ಸಂದಾಯ ಮಾಡದಿದ್ದರೆ ರಾಜ್ಯ ಸರ್ಕಾರವು, ಆ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಗಳಿಗೆ ಹಾಗೆ ಅಧಿಕೃತಗೊಳಿಸಿರುವ ವ್ಯಕ್ತಿಗೆ ಅಂಥ ವೆಚ್ಚಗಳನ್ನು ಅಂಥ ನಿಧಿಯ ಬಗ್ಗೆ ಇರುವ ಯಾವುದೇ ಇತರ ಚಾರ್ಜುಗಳಿಗಿಂತ ಆದ್ಯತೆಯನ್ನು ಕೊಟ್ಟು ಸಂದಾಯ ಮಾಡಲು ನಿರ್ದೇಶಿಸುವ ಆದೇಶವನ್ನು ಮಾಡಬಹುದು, ಮತ್ತು ಅವನು ನಿಗಮದ ಜಮೆಯಲ್ಲಿರುವ ನಿಧಿಗಳು ಅವಕಾಶ ಮಾಡಿ ಕೊಡುವಷ್ಟರಮಟ್ಟಿಗೆ ರಾಜ್ಯ ಸರ್ಕಾರದ ಆದೇಶವನ್ನು ಪಾಲಿಸತಕ್ಕದು.

(3) ಈ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಹೊರಡಿಸುವ ಬಗ್ಗೆ ಇರುವ ಸಂದರ್ಭಗಳ ಬಗ್ಗೆ ವರದಿಯೊಂದಿಗೆ, ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗ ರಾಜ್ಯ ವಿಧಾನ ಮಂಡಲದ ಮುಂದೆ ಇಡತಕ್ಕದು.

**38. ನಿಗಮವನ್ನು ರದ್ದುಗೊಳಿಸುವ ಅಧಿಕಾರ.**- (1) ರಾಜ್ಯ ಸರ್ಕಾರವು, ಆ ಸರ್ಕಾರವು ಸ್ಥಾಪಿಸಿದ ನಿಗಮವು ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಮೇರೆಗೆ, ಅದಕ್ಕೆ ವಿಧಿಸಲಾಗಿರುವ ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥವಾಗಿದೆ ಎಂದು ಅಥವಾ ಅವುಗಳನ್ನು ನೆರವೇರಿಸುವಲ್ಲಿ ಸತತವಾಗಿ ತಪ್ಪು ಮಾಡಿದೆ ಎಂದು ಅಥವಾ ಅದರ ಅಧಿಕಾರಗಳನ್ನು ಮೀರಿದೆ ಎಂದು ಅಥವಾ ದುರುಪಯೋಗಪಡಿಸಿಕೊಂಡಿದೆ ಎಂದು ಅಭಿಪ್ರಾಯಪಟ್ಟರೆ, ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ಆ ನಿಗಮವನ್ನು ರದ್ದುಗೊಳಿಸಬಹುದು:

ಪರಂತು, ಈ ಉಪ-ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ ರಾಜ್ಯ ಸರ್ಕಾರವು, ನಿಗಮಕ್ಕೆ ಅದನ್ನು ಏಕೆ ರದ್ದುಗೊಳಿಸಬಾರದು ಎಂಬ ಬಗ್ಗೆ ಕಾರಣವನ್ನು ತೋರಿಸಲು ಸೂಕ್ತ ಕಾಲಾವಕಾಶವನ್ನು ಕೊಡತಕ್ಕದು ಮತ್ತು ಆ ನಿಗಮದ ವಿವರಣೆ ಮತ್ತು ಆಕ್ಷೇಪಣೆಗಳು ಯಾವುವಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸತಕ್ಕದು.

(2) ನಿಗಮವನ್ನು ರದ್ದುಗೊಳಿಸುವ (1)ನೇ ಉಪ-ಪ್ರಕರಣದ ಮೇರೆಗಿನ ಅಧಿಸೂಚನೆಯನ್ನು ಪ್ರಕಟಿಸಿದ ಮೇಲೆ,-

(ಎ) ಆ ನಿಗಮದ ಎಲ್ಲಾ ನಿರ್ದೇಶಕರು ರದ್ದಿಯಾತಿಯ ದಿನಾಂಕದಿಂದ ಅಂಥ ನಿರ್ದೇಶಕರಾಗಿದ್ದಂಥ ಅವರ ಪದಗಳನ್ನು ತೆರವು ಮಾಡತಕ್ಕದು;

(ಬಿ) ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಉಪಬಂಧಗಳ ಮೂಲಕ ಅಥವಾ ಅವುಗಳ ಮೇರೆಗೆ ನಿಗಮವು ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಅಥವಾ ನೆರವೇರಿಸಬಹುದಾದಂಥ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ರದ್ದಿಯಾತಿಯ ಅವಧಿಯಲ್ಲಿ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿಯು ಅಥವಾ ವ್ಯಕ್ತಿಗಳು ಚಲಾಯಿಸತಕ್ಕದು ಮತ್ತು ನೆರವೇರಿಸತಕ್ಕದು;

(ಸಿ) ನಿಗಮದಲ್ಲಿ ನಿಹಿತವಾಗಿರುವ ಎಲ್ಲಾ ಸ್ವತ್ತು, ರದ್ದಿಯಾತಿಯ ಅವಧಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದು.

(3) (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರದ್ದಿಯಾತಿಯ ಅವಧಿಯು ಮುಕ್ತಾಯಗೊಂಡ ಮೇಲೆ ರಾಜ್ಯ ಸರ್ಕಾರವು,-

(ಎ) ರದ್ದಿಯಾತಿಯ ಅವಧಿಯನ್ನು ಅದು ಅವಶ್ಯಕವೆಂದು ಪರ್ಯಾಲೋಚಿಸ ಬಹುದಾದಂಥ ಇನ್ನೂ ಹೆಚ್ಚಿನ ಅವಧಿಗಾಗಿ ವಿಸ್ತರಿಸಬಹುದು; ಅಥವಾ

(ಬಿ) ಆ ನಿಗಮವನ್ನು 5ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಪುನರ್ ರಚಿಸಬಹುದು.

**39. ನಿಗಮದ ಸಮಾಪನ.–** (1) ಕಂಪನಿಗಳ ಅಥವಾ ನಿಗಮಗಳ ಪರಿಸಮಾಪನೆಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಯಾವುದೇ ಉಪಬಂಧವು ನಿಗಮಕ್ಕೆ ಅನ್ವಯವಾಗತಕ್ಕುದಲ್ಲ, ಮತ್ತು ಯಾವುದೇ ನಿಗಮವನ್ನು ಸಂಬಂಧಪಟ್ಟ ರಾಜ್ಯ ಸರ್ಕಾರವು ಆದೇಶದ ಮೂಲಕ ಹೊರತು ಮತ್ತು ಆ ಸರ್ಕಾರವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಹೊರತು ಸಮಾಪನಗೊಳಿಸತಕ್ಕುದಲ್ಲ:

ಪರಂತು, ಯಾವುದೇ ಅಂಥ ಆದೇಶವನ್ನು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯಿಂದ ಹೊರತು ಯಾವುದೇ ರಾಜ್ಯ ಸರ್ಕಾರವು ಮಾಡತಕ್ಕುದಲ್ಲ.

(2) ನಿಗಮವನ್ನು ಸಮಾಪನೆಗೊಳಿಸಿರುವ ಸಂದರ್ಭದಲ್ಲಿ ನಿಗಮದ ಆಸ್ತಿಗಳನ್ನು, ಹೊಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಈಡೇರಿಸಿದ ತರುವಾಯ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಮತ್ತು ಆ ಬಂಡವಾಳಕ್ಕೆ ಒದಗಿಸಿರಬಹುದಾದಂಥ ಇತರ ಪಕ್ಷಕಾರರು ಯಾರಾದರೂ ಇದ್ದರೆ, ಅವರ ನಡುವೆ ಆ ನಿಗಮದ ಒಟ್ಟು ಬಂಡವಾಳಕ್ಕೆ ಅವರಲ್ಲಿ ಪ್ರತಿಯೊಬ್ಬನು ಕೊಟ್ಟಿರುವ ವಂತಿಗೆಯ ಪ್ರಮಾಣದಲ್ಲಿ ವಿಭಾಗಿಸತಕ್ಕುದು.

**40. ರಸ್ತೆ ಸಾರಿಗೆ ಉದ್ಯಮವನ್ನು ಆರ್ಜಿಸುವ ಸಂಬಂಧ ನಷ್ಟ ಪರಿಹಾರ.–** ನಿಗಮವು ಈ ಅಧಿನಿಯಮದ ಮೇರೆಗೆ ಯಾವುದೇ ಇಡೀ ಉದ್ಯಮವನ್ನು ಅಥವಾ ಅದರ ಭಾಗವನ್ನು ಆರ್ಜಿಸಿದಾಗಲ್ಲೆಲ್ಲ, ನಿಗಮವು ಇಲ್ಲಿ ಇನ್ನು ಮುಂದೆ ನಿರೂಪಿಸಿರುವ ರೀತಿಯಲ್ಲಿ ಮತ್ತು ಅದಕ್ಕೆ ಅನುಸಾರವಾಗಿ ನಿರ್ಧರಿಸತಕ್ಕಂಥ ಮೊಬಲಗಿನ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕುದು, ಹಾಗೆಂದರೆ,–

(ಎ) ಒಪ್ಪಂದದ ಮೂಲಕ ನಷ್ಟ ಪರಿಹಾರದ ಮೊಬಲಗನ್ನು ನಿಗದಿಪಡಿಸ ಬಹುದಾಗಿರುವಲ್ಲಿ ಅದನ್ನು ಅಂಥ ಒಪ್ಪಂದಕ್ಕೆ ಅನುಸಾರವಾಗಿ ಸಂದಾಯ ಮಾಡತಕ್ಕುದು;

(ಬಿ) ಅಂಥ ಒಪ್ಪಂದವನ್ನು ಮಾಡಿಕೊಳ್ಳಲಾಗದೆ ಇರುವಲ್ಲಿ, ಆ ಮೊಬಲಗನ್ನು, ನಿಗಮದಿಂದ ನಾಮನಿರ್ದೇಶಿತನಾದ ಒಬ್ಬ, ನಷ್ಟ ಪರಿಹಾರವನ್ನು ಕೊಡಬೇಕಾಗಿರುವ ವ್ಯಕ್ತಿಯಿಂದ ನಾಮನಿರ್ದೇಶಿತನಾದ ಒಬ್ಬ ಮತ್ತು ಸಂಬಂಧಿಸಿದ ರಾಜ್ಯಕ್ಕೆ ಸಂಬಂಧಪಟ್ಟಂತೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯು ನಾಮನಿರ್ದೇಶನ ಮಾಡಬೇಕಾದ ಅಧ್ಯಕ್ಷ ಇವರನ್ನು ಒಳಗೊಂಡ ಮಧ್ಯಸ್ಥ ನ್ಯಾಯಾಧಿಕರಣವು ನಿರ್ಧರಿಸತಕ್ಕುದು;

(ಸಿ) ನ್ಯಾಯಾಧಿಕರಣದ ತೀರ್ಮಾನದ ವಿರುದ್ಧ ಉಚ್ಚನ್ಯಾಯಾಲಯಕ್ಕೆ ಅಪೀಲಿಗೆ ಅವಕಾಶ ಇರತಕ್ಕುದು ಮತ್ತು ಅಂಥ ಅಪೀಲಿನ ಬಗ್ಗೆ ಉಚ್ಚನ್ಯಾಯಾಲಯದ ಆದೇಶವು ಅಂತಿಮವಾದುದಾಗಿರತಕ್ಕುದು.

**41. [ನಿಗಮವು ಸ್ಥಳೀಯ ಪ್ರಾಧಿಕಾರವಾಗಿರುವುದಾಗಿ ಭಾವಿಸತಕ್ಕುದು ಮತ್ತು ಅನ್ಯಪಕ್ಷಕಾರನ ಹೊಣೆಯ ಬಗ್ಗೆ ಉಪಬಂಧ]** ರಸ್ತೆ ಸಾರಿಗೆ ನಿಗಮ (ತಿದ್ದುಪಡಿ) ಅಧಿನಿಯಮ, 1959 (1959ರ 28) 11ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.

**42. ಪ್ರವೇಶಾಧಿಕಾರ.-** ನಿಗಮಕ್ಕೆ ಅದರ ಯಾವುದೇ ಕಾಮಗಾರಿಯನ್ನು ಕಾರ್ಯಗತಗೊಳಿಸುವುದು ಅಥವಾ ಈ ಅಧಿನಿಯಮದ ಮೇರೆಗೆ ನಿಗಮವು ಅಧಿಕಾರಗಳನ್ನು ಚಲಾಯಿಸಲು ಅಥವಾ ಅದರ ಕರ್ತವ್ಯಗಳನ್ನು ನೆರವೇರಿಸಲು ಪ್ರಾರಂಭಿಕ ಅಥವಾ ಪ್ರಾಸಂಗಿಕವಾದ ಯಾವುದೇ ಮೋಜಣಿಯನ್ನು, ಪರೀಕ್ಷೆಯನ್ನು ಅಥವಾ ತನಿಖೆಯನ್ನು ಮಾಡುವುದು ಅವಶ್ಯವಾದಾಗಲೆಲ್ಲ, ನಿಗಮವು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕಾರ ನೀಡಿದ ನಿಗಮದ ಯಾವನೇ ಅಧಿಕಾರಿಯು ಅಥವಾ ಇತರ ನೌಕರನು ಜಿಲ್ಲಾ ಮ್ಯಾಜಿಸ್ಟ್ರೇಟ್‌ನ ಪೂರ್ವಾನುಮತಿಯೊಂದಿಗೆ ಯಾವುದೇ ಭೂಮಿಯ ಅಥವಾ ಆವರಣದ ಮೇಲೆ ಸೂರ್ಯೋದಯ ಮತ್ತು ಸೂರ್ಯಾಸ್ತಗಳ ನಡುವೆ ಅಂಥ ಭೂಮಿಯ ಅಥವಾ ಆವರಣದ ಒಡೆಯನಿಗೆ ಅಥವಾ ಅಧಿಭೋಗದಾರನಿಗೆ ಅಂಥ ಪ್ರವೇಶವನ್ನು ಮಾಡುವ ಉದ್ದೇಶದ ಬಗ್ಗೆ ನೋಟೀಸನ್ನು ಕೊಟ್ಟ ತರುವಾಯ ಮತ್ತು ಯಾವುದೇ ಇತರ ಕಾಲದಲ್ಲಿ ಅಂಥ ಭೂಮಿಯ ಅಥವಾ ಆವರಣದ ಒಡೆಯನ ಅಥವಾ ಅಧಿಭೋಗದಾರನ ಬರಹದಲ್ಲಿನ ಸಮ್ಮತಿಯೊಂದಿಗೆ ಅಂಥ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಅಥವಾ ಅಂಥ ಮೋಜಣಿ, ಪರೀಕ್ಷೆ ಅಥವಾ ತನಿಖೆಯನ್ನು ಮಾಡಲು ಪ್ರವೇಶಿಸಬಹುದು.

**43. ನಿಗಮದ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರರಾಗಿರತಕ್ಕದು:-** ಸರ್ಕಾರವೇ ಆಗಲಿ ಅಥವಾ ನಿಗಮವೇ ಆಗಲಿ ನೇಮಿಸಿರುವ ನಿಗಮದ ಎಲ್ಲಾ ನಿರ್ದೇಶಕರು, ಮತ್ತು ನಿಗಮದ ಎಲ್ಲಾ ಅಧಿಕಾರಿಗಳು ಮತ್ತು ಇತರ ನೌಕರರು ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಯಾವುದೇ ಉಪಬಂಧದ ಅನುಸರಣೆಯಲ್ಲಿ ಕಾರ್ಯನಡೆಸುತ್ತಿರುವಾಗ ಅಥವಾ ಕಾರ್ಯ ನಡೆಸುತ್ತಿರುವನೆಂದು ತಾತ್ಪರ್ಯವಾಗುವಂತಿದ್ದರೆ ಭಾರತ ದಂಡ ಸಂಹಿತೆ (1860ರ 45)ಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರನಾಗಿರುವುದಾಗಿ ಭಾವಿಸತಕ್ಕದು.

**44. ನಿಯಮ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ಮುಖ್ಯವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:-

(ಎ) ನಿಗಮದ ನಿರ್ದೇಶಕರ ನೇಮಕಾತಿಯ ಬಗೆಗಿನ ಷರತ್ತುಗಳು ಮತ್ತು ರೀತಿ, ಮಂಡಲಿಯಲ್ಲಿ ಕೇಂದ್ರಕ್ಕೆ ಮತ್ತು ರಾಜ್ಯಸರ್ಕಾರಗಳಿಗೆ, ಮತ್ತು 23ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಇತರ ಪಕ್ಷಕಾರರಿಗೆ ಷೇರುಗಳನ್ನು ಕೊಡುವಲ್ಲಿ ಅಂಥ ಷೇರುದಾರರ ಪ್ರಾತಿನಿಧ್ಯ ಮತ್ತು ಸಾಮಾನ್ಯವಾಗಿ ಮಂಡಲಿಯ ರಚನೆಗೆ ಸಂಬಂಧಪಟ್ಟ ಎಲ್ಲ ವಿಷಯಗಳು;

(ಬಿ) ನಿಗಮದ ನಿರ್ದೇಶಕರಿಗೆ ಅಥವಾ 10ನೇ ಪ್ರಕರಣದ ಮೇರೆಗೆ ಮಂಡಲಿಯೊಂದಿಗೆ ಸೇರಿಸಿಕೊಂಡಿರುವ ಇತರ ವ್ಯಕ್ತಿಗಳಿಗೆ ಸಂದಾಯ ಮಾಡಬೇಕಾದ ಸಂಭಾವನೆ, ಭತ್ಯಗಳು ಅಥವಾ ಫೀಜುಗಳು;

(ಸಿ) ನಿಗಮದ ನಿರ್ದೇಶಕರ ಪದಾವಧಿ, ಅವರಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿ;

(ಡಿ) ಮಂಡಲಿಯ ಸಭೆಯಲ್ಲಿ ಕೋರಂನ್ನು ರೂಪಿಸುವುದಕ್ಕಾಗಿ ಅವಶ್ಯವಾದ ನಿರ್ದೇಶಕರ ಸಂಖ್ಯೆ;

(ಇ) ನಿಗಮದ ವ್ಯವಸ್ಥಾಪಕ ನಿರ್ದೇಶಕನ, ಮುಖ್ಯ ಲೆಕ್ಕಪತ್ರಾಧಿಕಾರಿಯ, ಹಣಕಾಸು ಸಲಹೆಗಾರನ ಅಥವಾ ಸಂದರ್ಭಾನುಸಾರ, ಮುಖ್ಯ ಲೆಕ್ಕಪತ್ರಾಧಿಕಾರಿಯ ಮತ್ತು ಹಣಕಾಸು ಸಲಹೆಗಾರನ ನೇಮಕಾತಿ ಮತ್ತು ಸೇವಾಷರತ್ತುಗಳು ಮತ್ತು ವೇತನ ಶ್ರೇಣಿಗಳು;

(ಎಫ್) ಸಲಹಾ ಪರಿಷತ್ತಿನ ಸದಸ್ಯರ ಸಂಖ್ಯೆ ಮತ್ತು ಪದಾವಧಿ, ಅವರಿಗೆ ಸಂದಾಯ ಮಾಡಬೇಕಾದ ಭತ್ಯಗಳು, ಅವರು ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಅವರಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿ;

(ಎಫ್‌ಎಫ್) 19ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಯಾವ ಕಾರ್ಯವಿಧಾನಕ್ಕೆ ಅನುಸಾರವಾಗಿ ಯಾವುವೆ ಸಾಮಗ್ರಿಗಳು ಬಳಕೆಯಲ್ಲಿ ಇಲ್ಲವೆಂದು ಘೋಷಿಸಬಹುದೋ ಆ ಕಾರ್ಯವಿಧಾನ;

(ಜಿ) ನಿಗಮದ ಷೇರುಗಳನ್ನು ಯಾವ ರೀತಿಯಲ್ಲಿ ಹಂಚತಕ್ಕುದೋ, ವರ್ಗಾಯಿಸತಕ್ಕುದೋ ಅಥವಾ ವಿಮೋಚಿಸತಕ್ಕುದೋ ಆ ರೀತಿ;

(ಎಚ್) ನಿಗಮದ ನಿವ್ವಳ ಲಾಭಗಳನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳತಕ್ಕುದೋ ಆ ರೀತಿ;

(ಐ) 32ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಪ್ರತಿವರ್ಷದಲ್ಲಿ ಬಜೆಟನ್ನು ಯಾವ ದಿವಸದೊಳಗೆ ಮತ್ತು ಯಾವ ನಮೂನೆಯಲ್ಲಿ ತಯಾರಿಸತಕ್ಕುದೋ ಮತ್ತು ಒಪ್ಪಿಸತಕ್ಕುದೋ ಆ ದಿನಾಂಕ ಮತ್ತು ಆ ನಮೂನೆ;

(ಜೆ) ಲೆಕ್ಕಪತ್ರಗಳ ವಾರ್ಷಿಕ ವಿವರ ಪತ್ರವನ್ನು ಯಾವ ನಮೂನೆಯಲ್ಲಿ ತಯಾರಿಸತಕ್ಕುದೋ ಆ ನಮೂನೆ;

(ಕೆ) [ಲೋಪಿಸಲಾಗಿದೆ]

(ಎಲ್) 35ನೇ ಪ್ರಕರಣದ ಮೇರೆಗೆ ವಿವರ ಪಟ್ಟಿಕೆಗಳನ್ನು, ಅಂಕಿಅಂಶಗಳನ್ನು ಅಥವಾ ವರದಿಗಳನ್ನು ಯಾವ ನಮೂನೆಯಲ್ಲಿ ಒಪ್ಪಿಸತಕ್ಕುದೋ ಆ ನಮೂನೆ;

(ಎಂ) 40ನೇ ಪ್ರಕರಣದ ಮೇರೆಗೆ ಮಧ್ಯಸ್ಥ ನ್ಯಾಯಾಧಿಕರಣವು ಅನುಸರಿಸಬೇಕಾದ ಕಾರ್ಯವಿಧಾನ;

(ಎನ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ;

**45. ವಿನಿಯಮ ರಚನಾಧಿಕಾರ:-** (1) ನಿಗಮವು, ರಾಜ್ಯಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ನಿಗಮದ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಾಗಿಲ್ಲದೆ ಇರುವ ವಿನಿಯಮಗಳನ್ನು ರಚಿಸಬಹುದು.

(2) ಮುಖ್ಯವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಿಲ್ಲದೆ, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:-

(ಎ) 10ನೇ ಪ್ರಕರಣದ ಮೇರೆಗೆ ಅಂಥ ನಿಯಮಗಳು ಮಂಡಲಿಯೊಂದಿಗೆ ವ್ಯಕ್ತಿಗಳನ್ನು ಯಾವ ರೀತಿಯಲ್ಲಿ ಮತ್ತು ಯಾವ ಉದ್ದೇಶಗಳಿಗಾಗಿ ಜೊತೆಗೆ ಸೇರಿಸಿಕೊಳ್ಳಬಹುದೋ ಆ ರೀತಿ ಮತ್ತು ಆ ಉದ್ದೇಶಗಳು;

(ಬಿ) ಮಂಡಲಿಯ ಸಭೆಗಳ ಕಾಲ ಮತ್ತು ಸ್ಥಳ ಮತ್ತು ಅಂಥ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ ಅನುಸರಿಸಬೇಕಾದ ಕಾರ್ಯವಿಧಾನ;

(ಸಿ) ವ್ಯವಸ್ಥಾಪಕ ನಿರ್ದೇಶಕನನ್ನು, ಮುಖ್ಯ ಲೆಕ್ಕಪತ್ರಾಧಿಕಾರಿಯನ್ನು ಮತ್ತು ಹಣಕಾಸು ಸಲಹೆಗಾರನನ್ನು ಅಥವಾ ಸಂದರ್ಭಾನುಸಾರ ಮುಖ್ಯ ಲೆಕ್ಕಪತ್ರಾಧಿಕಾರಿಯನ್ನು ಮತ್ತು ಹಣಕಾಸು ಸಲಹೆಗಾರನನ್ನು ಹೊರತುಪಡಿಸಿ, ನಿಗಮದ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು ಮತ್ತು ವೇತನ ಶ್ರೇಣಿಗಳು;

(ಡಿ) 19ನೇ ಪ್ರಕರಣದ ಮೇರೆಗೆ ನಿಗಮದ ನೌಕರರಿಗೆ ಮತ್ತು ಇತರ ವ್ಯಕ್ತಿಗಳಿಗೆ ಪಾಸುಗಳನ್ನು ಕೊಡುವುದು;

(ಇ) 19ನೇ ಪ್ರಕರಣದ ಮೇರೆಗೆ ಬಳಸದ ಟಿಕೆಟುಗಳಿಗೆ ಮತ್ತು ರಿಯಾಯಿತಿ ಪಾಸುಗಳಿಗೆ ಸಂಬಂಧಿಸಿದಂತೆ ಮರುಪಾವತಿಯನ್ನು ಮಂಜೂರು ಮಾಡುವುದು.

**46. ನಿಯಮಗಳ ಉಲ್ಲಂಘನೆಗಾಗಿ ದಂಡ.-** ರಾಜ್ಯ ಸರ್ಕಾರವು, ನಿಯಮದ ಮೂಲಕ, 44ನೇ ಪ್ರಕರಣದ ಮೇರೆಗೆ ಅದು ರಚಿಸಿದ ಯಾವುದೇ ನಿಯಮದ ಉಲ್ಲಂಘನೆಗೆ, ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಅಂಥ ಉಲ್ಲಂಘನೆಯು ಮುಂದುವರಿದರೆ, ಆ ಅಪರಾಧಿಯು ಆ ಅಪರಾಧವನ್ನು ಸತತವಾಗಿ ಮಾಡಿರುವನೆಂದು ರುಜುವಾತು ಪಡಿಸಿರುವಂಥ ಕಾಲದಲ್ಲಿ ಮೊದಲಬಾರಿಗೆ ಅಪರಾಧವು ನಿರ್ಣಯವಾದ ದಿನಾಂಕದಿಂದ ಪ್ರತಿದಿವಸಕ್ಕಾಗಿ ಇಪ್ಪತ್ತು ರೂಪಾಯಿಗಳನ್ನು ಮೀರದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದೆಂದು ಉಪಬಂಧಿಸಬಹುದು.

**47. ಮುಂಬಯಿಗೆ ಸಂಬಂಧಪಟ್ಟ ವಿಶೇಷ ಉಪಬಂಧಗಳು.**- (1) 1949ರ ನವೆಂಬರ್ 16ನೇ ದಿನಾಂಕದ 1780 /5ನೇ ಸಂಖ್ಯೆಯ ಮುಂಬಯಿ ಸರ್ಕಾರದ ಅಧಿಸೂಚನೆಯಲ್ಲಿ ಉಲ್ಲೇಖಿಸಲಾದ ಮುಂಬಯಿ ರಾಜ್ಯ ರಸ್ತೆ ಸಾರಿಗೆ ನಿಗಮ ಎಂದು ಕರೆಯಲಾದ ನಿಕಾಯವನ್ನು ಮತ್ತು ಅದರ ಮಂಡಲಿಗಳನ್ನು (ಇಲ್ಲಿ ಇನ್ನು ಮುಂದೆ ಅನುಕ್ರಮವಾಗಿ "ಅಸ್ತಿತ್ವದಲ್ಲಿರುವ ನಿಗಮ" ಮತ್ತು "ಮಂಡಲಿ" ಎಂದು ಉಲ್ಲೇಖಿಸಲಾಗಿದೆ) ಯಾವುದರ ಮೇರೆಗೆ ಅವುಗಳನ್ನು ರಚಿಸಲಾಯಿತೋ ಆ ಅಧಿನಿಯಮಿತಿಯಲ್ಲಿ ಅಥವಾ ಆದೇಶದಲ್ಲಿ ಯಾವುದೇ ನ್ಯೂನತೆ ಅಥವಾ ಅಸಿಂಧುತ್ವ ಇದ್ದಾಗ್ಯೂ ಸದರಿ ಅಧಿಸೂಚನೆಯ ಎಲ್ಲ ಉಪಬಂಧಗಳನ್ನು ಈ ಪ್ರಕರಣದಲ್ಲಿ ಸೇರಿಸಲಾಗಿದ್ದಿದ್ದರೆ ಮತ್ತು ಅಧಿನಿಯಮಿತಿಗೊಳಿಸಿದ್ದಿದ್ದರೆ ಮತ್ತು ಈ ಪ್ರಕರಣವು ಸದರಿ ದಿನಾಂಕದಂದು ಮತ್ತು ಅಂದಿನಿಂದ ನಿರಂತರವಾಗಿ ಜಾರಿಯಲ್ಲಿದ್ದಿದ್ದರೆ ಹೇಗೋ ಹಾಗೆ ಎಲ್ಲ ಉದ್ದೇಶಗಳಿಗಾಗಿ ಸಿಂಧುವಾಗಿ ರಚಿಸಲಾಗಿದ್ದಿತೆಂದು ಭಾವಿಸತಕ್ಕುದು, ಮತ್ತು ತದನುಸಾರವಾಗಿ-

(ಎ) ಯಾವುದರ ಮೂಲಕ ಯಾವುದೇ ಸ್ವತ್ತನ್ನು, ಆಸ್ತಿಯನ್ನು ಅಥವಾ ಹಕ್ಕನ್ನು ಆರ್ಜಿಸಲಾಗಿತ್ತೋ ಅಥವಾ ಕರಾರಿನ ಮೂಲಕವೇ ಆಗಲಿ ಅಥವಾ ಅನ್ಯಥಾ ಯಾವುದೇ ಹೊಣೆಯನ್ನು ಅಥವಾ ಬಾಧ್ಯತೆಯನ್ನು ವಹಿಸಲಾಗಿದ್ದಿತೋ ಆ ಯಾವುದೇ ಕ್ರಮವನ್ನು ಅಥವಾ ವ್ಯವಹಾರವನ್ನೂ ಒಳಗೊಂಡು, ಅಸ್ತಿತ್ವದಲ್ಲಿರುವ ನಿಗಮದ ಅಥವಾ ಮಂಡಲಿಯ ಎಲ್ಲ ಕ್ರಮವನ್ನು, ಮತ್ತು ಅವುಗಳೊಂದಿಗಿನ ಎಲ್ಲ ವ್ಯವಹಾರಗಳನ್ನು ಸಿಂಧುವಾಗಿ ಮತ್ತು ಕಾನೂನು ಸಮ್ಮತವಾಗಿ ಕೈಗೊಳ್ಳಲಾಗಿದ್ದಿತು ಅಥವಾ ಮಾಡಲಾಗಿದ್ದಿತು ಎಂದು ಭಾವಿಸತಕ್ಕುದು; ಮತ್ತು

(ಬಿ) ಯಾವುದರ ಮೇರೆಗೆ ಅಸ್ತಿತ್ವದಲ್ಲಿರುವ ನಿಗಮವನ್ನು ಅಥವಾ ಮಂಡಲಿಯನ್ನು ರಚಿಸಲಾಗಿದ್ದಿತೋ ಆ ಅಧಿನಿಯಮಿತಿಯಲ್ಲಿನ ಅಥವಾ ಆದೇಶದಲ್ಲಿನ ಯಾವುದೇ ನ್ಯೂನತೆಯ ಅಥವಾ ಅದರ ಅಸಿಂಧುತ್ವದ ಕಾರಣ ಮಾತ್ರದಿಂದಲೇ ಅಸ್ತಿತ್ವದಲ್ಲಿರುವ ನಿಗಮವು ಅಥವಾ ಮಂಡಲಿಯು ಕೈಗೊಂಡಿರುವ ಯಾವುದೇ ಕ್ರಮಕ್ಕೆ ಸಂಬಂಧಿಸಿದಂತೆ ಅಥವಾ ಅದನ್ನು ಸ್ಥಾಪಿಸುವುದಕ್ಕೆ ಸಂಬಂಧಪಟ್ಟಂತೆ ಮುಂಬಯಿ ಸರ್ಕಾರದ ಅಥವಾ ಆ ಮಂಡಲಿಯ ಯಾವನೇ ಸದಸ್ಯನ ಅಥವಾ ಅಸ್ತಿತ್ವದಲ್ಲಿರುವ ನಿಗಮದ ಯಾವನೇ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆ ಇರತಕ್ಕುದಲ್ಲ.

(2) ಮುಂಬಯಿ ರಾಜ್ಯದಲ್ಲಿ 3ನೇ ಪ್ರಕರಣದ ಮೇರೆಗೆ ನಿಗಮವನ್ನು ಸ್ಥಾಪಿಸಿದ ಮೇಲೆ (ಇಲ್ಲಿ ಇನ್ನು ಮುಂದೆ "ಹೊಸ ನಿಗಮ" ಎಂದು ಉಲ್ಲೇಖಿಸಲಾಗಿದೆ),-

(ಎ) ಅಸ್ತಿತ್ವದಲ್ಲಿರುವ ನಿಗಮವನ್ನು ಮತ್ತು ಮಂಡಲಿಯನ್ನು ವಿಸರ್ಜಿಸಿರುವುದಾಗಿ ಭಾವಿಸತಕ್ಕುದು ಮತ್ತು ಅವುಗಳು ಕೆಲಸ ಮಾಡುವುದು ಕೊನೆಗೊಳ್ಳತಕ್ಕುದು;

(ಬಿ) ಅಸ್ತಿತ್ವದಲ್ಲಿರುವ ನಿಗಮದಲ್ಲಿ ನಿಹಿತಗೊಂಡಿರುವ ಎಲ್ಲ ಸ್ವತ್ತು ಮತ್ತು ಆಸ್ತಿಗಳು ಹೊಸ ನಿಗಮದಲ್ಲಿ ನಿಹಿತಗೊಳ್ಳತಕ್ಕುದು;

(ಸಿ) ಯಾವುದೇ ಕರಾರಿನಿಂದಾಗಲಿ ಅಥವಾ ಅನ್ಯಥಾ ಉದ್ಭವಿಸುವ ಅಸ್ತಿತ್ವದಲ್ಲಿರುವ ನಿಗಮದ ಎಲ್ಲಾ ಹಕ್ಕುಗಳು, ಹೊಣೆಗಳು ಮತ್ತು ಬಾಧ್ಯತೆಗಳು ಅನುಕ್ರಮವಾಗಿ ಆ ಹೊಸ ನಿಗಮದ ಹಕ್ಕುಗಳು, ಹೊಣೆಗಳು ಮತ್ತು ಬಾಧ್ಯತೆಗಳಾಗಿರತಕ್ಕುದು; ಮತ್ತು

(ಡಿ) ಅಸ್ತಿತ್ವದಲ್ಲಿರುವ ನಿಗಮ ಅಥವಾ ಮಂಡಲಿಗೆ ಕೊಟ್ಟಿರುವ ಎಲ್ಲಾ ಲೈಸೆನ್ಸುಗಳು ಮತ್ತು ಪರ್ಮಿಟ್ಟುಗಳನ್ನು ಮತ್ತು ಅವುಗಳೊಂದಿಗೆ ಮಾಡಿಕೊಂಡಿರುವ ಎಲ್ಲ ಕರಾರುಗಳನ್ನು ಮತ್ತು ಅವುಗಳ ಪರವಾಗಿ ಬರೆದುಕೊಟ್ಟಿರುವ ಎಲ್ಲ ಲಿಖಿತಗಳನ್ನು ಆ ಹೊಸ ನಿಗಮಕ್ಕೆ ಕೊಟ್ಟಿರುವುದಾಗಿ, ಅದರೊಂದಿಗೆ ಮಾಡಿಕೊಂಡಿರುವುದಾಗಿ ಅಥವಾ ಅದರ ಪರವಾಗಿ ಬರೆದುಕೊಟ್ಟಿರುವುದಾಗಿ ಭಾವಿಸತಕ್ಕುದು ಮತ್ತು ತದನುಸಾರವಾಗಿ ಅವುಗಳು ಪರಿಣಾಮವನ್ನು ಹೊಂದಿರತಕ್ಕುದು.

**47ಎ. ನಿರ್ದಿಷ್ಟ ನಿಗಮದ ಪುನರ್‌ರಚನೆಗಾಗಿ ಅಥವಾ ವಿಸರ್ಜನೆಗಾಗಿ ವಿಶೇಷ ಉಪಬಂಧ.**- ರಾಜ್ಯಗಳ ಪುನರ್‌ವಿಂಗಡಣೆ ಅಧಿನಿಯಮ, 1956 (1956ರ 37)ರ ಅಥವಾ ರಾಜ್ಯಗಳ ಪುನರ್‌ವಿಂಗಡಣೆಗೆ ಸಂಬಂಧಪಟ್ಟ ಯಾವುದೇ ಇತರ ಅಧಿನಿಯಮಿತಿಯ ಮೇರೆಗೆ ರಾಜ್ಯಗಳ ಪುನರ್ವಿಂಗಡಣೆಯ ಕಾರಣದಿಂದಾಗಿ, ಯಾವುದಕ್ಕೆ ಸಂಬಂಧಿಸಿದಂತೆ ಆ ಪುನರ್ವಿಂಗಡಣೆಯು ನಡೆದಂಥ ದಿವಸದ ನಿಕಟಪೂರ್ವದಲ್ಲಿ ನಿಗಮವು ಕೆಲಸ ಮಾಡುತ್ತಿದ್ದಿತೋ ಮತ್ತು ಕಾರ್ಯಾಚರಣೆಯನ್ನು ನಡೆಸುತ್ತಿದ್ದಿತೋ ಆ ಇಡೀ ರಾಜ್ಯವನ್ನು ಅಥವಾ ಅದರ ಯಾವುದೇ ಭಾಗವನ್ನು ಆ ದಿವಸದಂದು ಇನ್ನೊಂದು ರಾಜ್ಯಕ್ಕೆ ವರ್ಗಾಯಿಸಿರುವಲ್ಲಿ ಮತ್ತು ಅಂಥ ವರ್ಗಾವಣೆಯ ಕಾರಣದಿಂದಾಗಿ ಆ ರಾಜ್ಯಸರ್ಕಾರಕ್ಕೆ ಆ ನಿಗಮವನ್ನು ಯಾವುದೇ ರೀತಿಯಲ್ಲಾಗಲಿ ಪುನರ್‌ರಚಿಸಬೇಕೆಂದು ಅಥವಾ ಪುನಃ ಸಂಘಟಿಸಬೇಕೆಂದು ಅಥವಾ ಅದನ್ನು ವಿಸರ್ಜಿಸಬೇಕೆಂದು ಕಂಡುಬಂದರೆ ಆ ರಾಜ್ಯಸರ್ಕಾರವು ಹೊಸ ನಿಗಮಗಳ ರಚನೆಯ, ಆ ನಿಗಮವನ್ನು ಯಾವುದೇ ಇತರ ನಿಗಮದೊಂದಿಗೆ, ನಿಗಮಿತ ನಿಕಾಯದೊಂದಿಗೆ ಅಥವಾ ಇನ್ನೊಂದು ರಾಜ್ಯಸರ್ಕಾರದ ವಾಣಿಜ್ಯ ಉದ್ಯಮದೊಂದಿಗೆ ಸಮ್ಮಿಲನಗೊಳಿಸುವ, ಆ ನಿಗಮದ ಇಡೀ ಅಥವಾ ಭಾಗಶಃ ಆಸ್ತಿಗಳನ್ನು, ಹಕ್ಕಗಳನ್ನು, ಹೊಣೆಗಳನ್ನು ಯಾವುದೇ ಇತರ ನಿಗಮಕ್ಕೆ, ನಿಗಮಿತ ನಿಕಾಯಕ್ಕೆ ಅಥವಾ ಇತರ ರಾಜ್ಯಸರ್ಕಾರದ ವಾಣಿಜ್ಯ ಉದ್ಯಮಕ್ಕೆ ವರ್ಗಾವಣೆಯ ಮತ್ತು ನಿಗಮದ ಕೆಲಸಗಾರರ ವರ್ಗಾವಣೆಯ ಮತ್ತು ಮರುನಿಯೋಜನೆಯ ಬಗೆಗಿನ ಪ್ರಸ್ತಾವನೆಗಳನ್ನೂ ಒಳಗೊಂಡು ಆ ನಿಗಮದ ಪುನರ್‌ರಚನೆಗಾಗಿ, ಪುನರ್‌ಸಂಘಟನೆಗಾಗಿ ಅಥವಾ ವಿಸರ್ಜನೆಗಾಗಿ ಯೋಜನೆಯನ್ನು ರೂಪಿಸಬಹುದು ಮತ್ತು ರಾಜ್ಯಸರ್ಕಾರವು ಆ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಬಹುದು.

**ವಿವರಣೆ:**- ಈ ಉಪ-ಪ್ರಕರಣದ ಮೇರೆಗೆ ಯಾವುದೇ ಯೋಜನೆಯನ್ನು ರೂಪಿಸುವ ಉದ್ದೇಶಕ್ಕಾಗಿ "ರಾಜ್ಯಸರ್ಕಾರವು,"-

(i) ಮುಂಬಯಿ ರಾಜ್ಯರಸ್ತೆ ಸಾರಿಗೆ ನಿಗಮಕ್ಕೆ ಸಂಬಂಧಪಟ್ಟಂತೆ, ಮುಂಬಯಿ ಪುನರ್ವಿಂಗಡಣೆ ಅಧಿನಿಯಮ, 1960 (1960ರ 11)ರ ಮೇರೆಗೆ ರಚಿಸಿರುವಂತೆ ಮಹಾರಾಷ್ಟ್ರ ಅಥವಾ ಗುಜರಾತ್ ರಾಜ್ಯದ ಸರ್ಕಾರ ಎಂಬ ಅರ್ಥವನ್ನು ಹೊಂದಿರತಕ್ಕುದು;

(ii) ಪೆಪ್ಸು ರಸ್ತೆ ಸಾರಿಗೆ ನಿಗಮಕ್ಕೆ ಸಂಬಂಧಪಟ್ಟಂತೆ, ರಾಜ್ಯಗಳ ಪುನರ್‌ವಿಂಗಡಣೆ ಅಧಿನಿಯಮ, 1956 (1956ರ 37)ರ ಉಪಬಂಧಗಳ ಮೇರೆಗೆ ರಚಿಸಿರುವಂತೆ ಪಂಜಾಬ್ ರಾಜ್ಯದ ಸರ್ಕಾರ ಎಂಬ ಅರ್ಥವನ್ನು ಹೊಂದಿರತಕ್ಕುದು;

(iii) ಅಸ್ಸಾಂ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಸಂಬಂಧಪಟ್ಟಂತೆ ಉತ್ತರ-ಪೂರ್ವ ಪ್ರದೇಶಗಳ (ಪುನರ್ವಿಂಗಡಣೆ) ಅಧಿನಿಯಮ, 1971 (1971ರ 81)ರ ಮೇರೆಗೆ ರಚಿಸಿರುವಂತೆ ಅಸ್ಸಾಂ ಅಥವಾ ಮೇಘಾಲಯ ರಾಜ್ಯದ ಸರ್ಕಾರವೆಂಬ ಅರ್ಥವನ್ನು ಹೊಂದಿರತಕ್ಕುದು.

(2) ಯಾವುದೇ ಅಂಥ ಯೋಜನೆಯನ್ನು ಸ್ವೀಕರಿಸಿದ ಮೇಲೆ, ಕೇಂದ್ರಸರ್ಕಾರವು ಸಂಬಂಧಪಟ್ಟ ರಾಜ್ಯಸರ್ಕಾರಗಳೊಂದಿಗೆ ಸಮಾಲೋಚಿಸಿದ ತರುವಾಯ, ಆ ಯೋಜನೆಯನ್ನು ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆ ಅನುಮೋದಿಸಬಹುದು ಮತ್ತು ಆ ಅನುಮೋದಿತ ಯೋಜನೆಯನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ, ಕೇಂದ್ರಸರ್ಕಾರವು, ಅದಕ್ಕೆ ಸಂಬಂಧಪಟ್ಟಂತೆ ಸೂಕ್ತವೆಂದು ತಾನು ಯೋಚಿಸುವಂಥ ಆದೇಶವನ್ನು ಮಾಡಬಹುದು ಮತ್ತು ಹಾಗೆ ಮಾಡಿದ ಪ್ರತಿಯೊಂದು ಆದೇಶವು ಈ ಅಧಿನಿಯಮದಲ್ಲಿ ಏನೇ ಇದ್ದರೂ ಪರಿಣಾಮವನ್ನು ಹೊಂದಿರತಕ್ಕುದು.

(3) (2)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:-

(ಎ) 39ನೇ ಪ್ರಕರಣದಲ್ಲಿ ಏನೇ ಇದ್ದರೂ ನಿಗಮದ ವಿಸರ್ಜನೆ;

(ಬಿ) ಅವಶ್ಯವಿರುವಲ್ಲಿ ಯಾವುದೇ ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚು ನಿಗಮಗಳನ್ನು ಸ್ಥಾಪಿಸುವುದನ್ನೂ ಒಳಗೊಂಡು ಯಾವುದೇ ಆದ ರೀತಿಯಲ್ಲಿ ನಿಗಮವನ್ನು ಪುನರ್ ರಚಿಸುವುದು ಅಥವಾ ಪುನಃ ಸಂಘಟಿಸುವುದು;

(ಸಿ) ಎರಡು ಅಥವಾ ಅದಕ್ಕಿಂತ ಹೆಚ್ಚಿನ ನಿಗಮಗಳೊಂದಿಗೆ ಅಥವಾ ಯಾವುದೇ ಇತರ ನಿಗಮದೊಂದಿಗೆ ಅಥವಾ ಯಾವುದೇ ಇತರ ನಿಗಮಿತ ನಿಕಾಯದೊಂದಿಗೆ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದ ವಾಣಿಜ್ಯ ಉದ್ಯಮದೊಂದಿಗೆ ನಿಗಮದ ಸಮ್ಮಿಲನ;

(ಡಿ) ಯಾವ ಪ್ರದೇಶಕ್ಕಾಗಿ ನಿಗಮವನ್ನು ಸ್ಥಾಪಿಸಲಾಗಿದೆಯೋ ಆ ಪ್ರದೇಶವನ್ನು ವಿಸ್ತರಿಸುವುದು ಅಥವಾ ಅದರಿಂದ ಯಾವುದೇ ಪ್ರದೇಶವನ್ನು ಹೊರತುಪಡಿಸುವುದು;

(ಇ) ನಿಗಮಕ್ಕೆ ಕೊಟ್ಟಿರುವ ಯಾವುವೇ ಲೈಸನ್ಸ್‌ಗಳು ಅಥವಾ ಪರ್ಮಿಟ್ಟುಗಳ ವರ್ಗಾವಣೆಯನ್ನೂ ಒಳಗೊಂಡು ನಿಗಮದ ಆಸ್ತಿಗಳನ್ನು, ಹಕ್ಕುಗಳನ್ನು ಮತ್ತು ಹೊಣೆಗಳನ್ನು ಇಡಿಯಾಗಿ ಅಥವಾ ಭಾಗಶಃ ಯಾವುದೇ ಇತರ ರಾಜ್ಯ ಸರ್ಕಾರದ ಯಾವುದೇ ಇತರ ನಿಗಮಕ್ಕೆ, ನಿಗಮಿತ ನಿಕಾಯಕ್ಕೆ ಅಥವಾ

ಯಾವುದೇ ವಾಣಿಜ್ಯ ಉದ್ಯಮಕ್ಕೆ ವರ್ಗಾಯಿಸುವುದು; ಮತ್ತು ಅಂಥ ವರ್ಗಾವಣೆಯ ನಿಬಂಧನೆಗಳು ಮತ್ತು ಷರತ್ತುಗಳು;

(ಎಫ್) ನಿಗಮದ ಯಾರೇ ಕೆಲಸಗಾರರನ್ನು ವರ್ಗಾವಣೆ ಪಡೆದವನಿಗೆ ಅಥವಾ ಅವನಿಂದ ಮತ್ತು ರಾಜ್ಯಗಳ ಪುನರ್ ವಿಂಗಡಣೆ ಅಧಿನಿಯಮ, 1956 (1956ರ 37) 111ನೇ ಪ್ರಕರಣದ ಅಥವಾ ರಾಜ್ಯಗಳ ಪುನರ್ ವಿಂಗಡಣೆಗೆ ಸಂಬಂಧಪಟ್ಟ ಯಾವುದೇ ಇತರ ಅಧಿನಿಯಮಿತಿಯ ಉಪಬಂಧಗಳಿಗೆ ಒಳಪಟ್ಟು ಅಂಥ ವರ್ಗಾವಣೆ ಅಥವಾ ಮರುನಿಯೋಜನೆಯ ತರುವಾಯ ಅಂಥ ಕೆಲಸಗಾರರಿಗೆ ಅನ್ವಯವಾಗಬಹುದಾದ ಸೇವಾನಿಬಂಧನೆಗಳು ಮತ್ತು ಷರತ್ತುಗಳು;

(ಜಿ) ಅನುಮೋದಿತ ಯೋಜನೆಯನ್ನು ಜಾರಿಗೊಳಿಸಲು ಅವಶ್ಯವಾಗಬಹುದಾದಂಥ ಪ್ರಾಸಂಗಿಕವಾದ, ತತ್ಪರಿಣಾಮವಾದ ಮತ್ತು ಪೂರಕ ವಿಷಯಗಳು.

(4) ಯಾವುದೇ ನಿಗಮದ ಆಸ್ತಿಗಳನ್ನು, ಹಕ್ಕುಗಳನ್ನು ಮತ್ತು ಹೊಣೆಗಳನ್ನು ವರ್ಗಾಯಿಸುವ ಈ ಪ್ರಕರಣದ ಮೇರೆಗಿನ ಆದೇಶವನ್ನು ಮಾಡಿರುವಲ್ಲಿ ಆಗ ಆ ಆದೇಶದ ಕಾರಣದಿಂದಾಗಿ, ನಿಗಮದ ಅಂಥ ಆಸ್ತಿಗಳು, ಹಕ್ಕುಗಳು ಮತ್ತು ಹೊಣೆಗಳು ವರ್ಗಾವಣೆ ಪಡೆದವನಲ್ಲಿ ನಿಹಿತವಾಗತಕ್ಕುದು ಮತ್ತು ಅವನ ಆಸ್ತಿಗಳು, ಹಕ್ಕುಗಳು ಮತ್ತು ಹೊಣೆಗಳು ಆಗಿರತಕ್ಕುದು.

**48. ಮುಂಬಯಿ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಸಂಬಂಧಪಟ್ಟ ಮಧ್ಯಕಾಲೀನ ಉಪಬಂಧಗಳು.**- 47ಎ ಪ್ರಕರಣದಲ್ಲಿ ಏನೇ ಇದ್ದರೂ, ಅದರ (1)ನೇ ಉಪಪ್ರಕರಣದ ಮೇರೆಗೆ ಯೋಜನೆಯನ್ನು ರೂಪಿಸುವುದು ಮತ್ತು ಅದನ್ನು 1960ರ ಮೇ ಒಂದನೇ ದಿವಸಕ್ಕೆ ಮುಂಚೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವುದು ಮುಂಬಯಿ ರಾಜ್ಯ ಸರ್ಕಾರಕ್ಕೆ ಕಾನೂನು ಸಮ್ಮತವಾಗಿರತಕ್ಕುದು ಮತ್ತು ಅಂಥ ಸಂದರ್ಭದಲ್ಲಿ, ಅದರ (2)ನೇ ಉಪ-ಪ್ರಕರಣದ ಮೇರೆಗೆ ಆದೇಶವನ್ನು ಮಾಡುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರದಾನ ಮಾಡಿದ ಅಧಿಕಾರವನ್ನು ಆ ದಿವಸಕ್ಕೆ ಮುಂಚೆ ಚಲಾಯಿಸಬಹುದು, ಆದರೆ ಹಾಗೆ ಮಾಡಿರುವ ಯಾವುದೇ ಆದೇಶವು ಆ ದಿವಸದವರೆಗೆ ಜಾರಿಗೆ ಬರತಕ್ಕುದಲ್ಲ.

*   *   *